ಅಪರಂಜಿ


ಸೆಪ್ಟೆಂಬರ್ 1989


ತಿಳಿನಗೆಯ ಕಾರಂಜಿ



- ಆನಂದ್
- ಸುಮತೀಂದ್ರ ನಾಡಿಗ
- ಲೀಲಾ ಮಿರ್ಲೆ
- ದುರ್ಗಾ
- ಆರ್. ಕೆ. ಲಕ್ಷ್ಮಣ್
- ಶಿವು
- ಆರತಿ
- ರಾ. ಶಿ.
- ನ. ರತ್ನ
- ನೀರಗುಂದ ಕೇಶವಮೂರ್ತಿರಾವ್
- ಅ. ರಾ. ಸೇ.

ಬಿಡಿಪ್ರತಿ : ಒಂದೂವರೆ ರೂಪಾಯಿ







(ತಿಳಿನಗೆಯ ಕಾರಂಜಿ)

ಸಂಪುಟ ೬ | ಸೆಪ್ಟೆಂಬರ್ ೧೯೮೯ | ಸಂಚಿಕೆ ೧೨

ಚಂದಾ ವಿವರ :

ಬಿಡಿ ಪ್ರತಿ :
ಒಂದೂವರೆ ರೂಪಾಯಿ
ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 150 ರೂ.

ಗೌರವ ಸಲಹೆಗಾರರು :

ಶ್ರೀ ಆ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :

ಅಪರಂಜಿ ಕಾರ್ಯಾಲಯ
36, 6ನೇಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು-560 003

ಕೆಲಸದ ವೇಳೆ :
ಬೆಳಿಗ್ಗೆ 8ರಿಂದ 10ರ ವರೆಗೆ ಮಾತ್ರ

ಸಂಪಾದಕ :

ಶಿವಕುಮಾರ್

ಹಾದಿಯಲ್ಲಿ ಕೇಳಿಸಿದ್ದು

"ಕೋಟ್ಯಾಂತರ ವರ್ಷಗಳಿಂದ 'ವಿಕಾಸ ವಾದ' ಕಲಿಸಿರೋದಾದ್ರೂ ಏನ್ರಿ ? ಬದುಕಬೇಕಾದರೆ ಪರಿಸರಕ್ಕೆ ಹೊಂದಿಕೋಬೇಕು—Adopt or Perish-ಅಂತ ತಾನೆ ? ಎವೊಲ್ಯೂಷನ್ ವಿರುದ್ಧ ಹೋಗಬೇಕು ಅಂತಾರಲ್ಲಾ ಈ C.A.G. ? ಇದ್ಯಾವ ನ್ಯಾಯ ಅಂತೀನಿ"

ಈ ಸಂಚಿಕೆಯಲ್ಲಿ.......

ವ್ಯಂಗ್ಯ ಚಿತ್ರಗಳು : ಬಾಗೂರು ಮಾರ್ಕಾಂಡೇಯ

ಮುದ್ರಣ : ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ, ಬೆಂಗಳೂರು-560 003
ದೂರವಾಣಿ - 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೬ ಸೆಪ್ಟೆಂಬರ್-೧೯೮೯ ಸಂಚಿಕೆ ೧೨

ಮಾತನ್ನು ವಿಚಾರ ಮಾಡಬಾರದು, ಮಾತಾಡುವವನನ್ನು ಅರಿಯಬೇಕು.

-ಕೌಷೀತಕಿ


ದೇಹೇಂದ್ರಿಯಂಗಳನ್ನು ಪ್ರಾಣವೇ ಎತ್ತಿ ಹಿಡಿಯುತ್ತದೆ. ಮಾತನ್ನು ಅರಿತರೆ ಸಾಲದು; ಪ್ರಾಣವನ್ನು ಎಂದರೆ ಬ್ರಹ್ಮವನ್ನು ವಿಚಾರ ಮಾಡಬೇಕು ಎಂಬುದು ಉಪನಿಷತ್ತಿನ ಅಭಿಪ್ರಾಯ.

ಈಗ ಮಾತುಗಳ ಗೋಪುರ ಬ್ರಹ್ಮಾಂಡದ ನೂರರಷ್ಟು ಬೆಳೆದಿದೆ. ಇದರಲ್ಲಿ ಯಾವುದನ್ನು ವಿಚಾರಿಸಬೇಕು? ವಿಚಾರಕ್ಕೆ ಅರ್ಹವಾದುದನ್ನು ಹೇಳುವವನು ಅರ್ಹ ವ್ಯಕ್ತಿಯಾಗಿರಬೇಕು.

ಗುರುಗಳು ಹೇಳಿದಂತೆ ಕೇಳಬೇಕು, ಮಾಡಿದಂತೆ ಮಾಡಬಾರದು ಎಂಬ ಉಪನಿಷತ್ತಿನ ಮಾತು, ಹೇಳುವವನ ಅರ್ಹತೆಯನ್ನು ಅಧಿಕಾರ -ಎಲಿಜಿಬಿಲಿಟಿ/ ಕ್ರೆಡಿಬಿಲಿಟಿವನ್ನು ಒತ್ತಿ ಹೇಳುತ್ತದೆ.

ಆರು ವರ್ಷ ತುಂಬಿದ ಅಪರಂಜಿ, ಮೊದಲನೆಯದಾಗಿ, ಉಳಿದುಕೊಂಡು ಬಂದಿದೆ; ಬೆಳೆಯುತ್ತಲೂ ಇದೆ. ಹಲವು ಹೊಸ ಸಮರ್ಥ ಬರಹಗಾರರು ಅಪರಂಜಿ ಬಳಗದಲ್ಲಿದ್ದಾರೆ. ಬರಿಯ ನಗಿಸುವುದಷ್ಟೇ ಅಪರಂಜಿಯ ಉದ್ದೇಶವಲ್ಲ. ಮನೋ ವಿಕಾಸ, ಒಳಿತಿನ ಅನ್ವೇಷಣೆ, ಮೌಲ್ಯಗಳ ಪರೀಕ್ಷೆಯನ್ನೂ ಅದು ಮಾಡಿದೆ. ಕೊರವಂಜಿಯ ಕೊಡುಗೆಯ ಅಧ್ಯಯನವನ್ನು ಶೀಘ್ರದಲ್ಲೇ ಕೈಗೊಳ್ಳಲಿದೆ.

ನಿಮ್ಮೆಲ್ಲರ ಅಭಿಮಾನವೇ ಅಪರಂಜಿಗೆ ಶ್ರೀರಕ್ಷೆ.



—ಆನಂದ್

ಲೋಕ ಸಭೆಯು ಬಗ್ಗೆ ಕಿಡಿಗಳನ್ನ ಹಾರಿಸಬೇಡಿ ಅಂತ ನಮ್ಮ ಓದುಗರು ಹಲವಾರು ಮಂದಿ ಕೇಳಿಕೊಂಡಿದ್ದಾರೆ!

ಯಾವ ಲೋಕ ಸಭೆ ?

* * *

ಕನ್ನಡ ಅನುಷ್ಠಾನಕ್ಕೆ ಇಂಗ್ಲಿಷ್‌ನಲ್ಲಿ ಮನವಿ !

— ಪತ್ರಿಕೆ

ಅನುಷ್ಠಾನ ಅಂದ್ರೆ ಏನು ಬುದ್ದಿ ?

* * *

ಟೆಲಿಫೋನ್ ವಿಚಾರಣೆ ; ಐದು ಸೆಕೆಂಡಿನಲ್ಲೇ ಉತ್ತರ.

— ಸುದ್ದಿ

ದಾರುಣ ಹಾಸ್ಯ ಅಂದರೆ ಇದು !

* * *

ಬೆಂಗಳೂರು ದಕ್ಷಿಣದ ಅನೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ.

— ಪತ್ರಿಕೆ

ಇದಕ್ಕೆ ಉತ್ತರ ಹುಡುಕಲೇ ಬೇಕು !

* * *

ಪಂಪೆಯಲ್ಲಿ ಕನ್ನಡ ಶಕ್ತಿ ಕೇಂದ್ರದ ಮಹಾ ಅಧಿವೇಶನ.

— ಸುದ್ದಿ

ಕನ್ನಡ Among the ruins! ಅರ್ಥವಾಯಿತು !

*   *   *

ಕಾರ್ಲ್‌ಟನ್ ಹೌಸ್ ಕೇರಳದ ವ್ಯಕ್ತಿಗೆ ಗುತ್ತಿಗೆ ನೀಡಲು ಸಂಚು.

— ಪತ್ರಿಕೆ

ಕೇರಳ್‌ಟನ್ ಹೌಸ್ ಅಂದರಾಯಿತು !

*   *   *

ಅಭಿವೃದ್ಧಿ ವೆಚ್ಚ; ಹೆಗಡೆ ಹೇಳಿಕೆ 'ಅಪ್ಪಟ ಸುಳ್ಳು'.

— ಶ್ರೀ ಮೊಯಿಂ

ಇನ್ನೂ ಎಷ್ಟು ತರಹ ಸುಳ್ಳುಗಳಿವೆ?

*   *   *

ಕ್ಲಬ್ಬಿನಲ್ಲಿ ಕೇಳಿದ್ದು :
'ವಿನಾಶ ಕಾಲೇ ವಿಪರೀತ ಬೋಫಾರ್ಸಿಹಿ !'

*   *   *

ಹೈಕೋರ್ಟಿನಲ್ಲಿ ಸುಳ್ಳು ಬಾಂಬ್ ಬೆದರಿಕೆ.

— ಸುದ್ದಿ

ಅನ್ಯಾಯಂ, ಅನ್ಯಾಯಂ !

*   *   *

ಕ್ಲಾರ್ಕೊಬ್ಬ, Corporation Buy-laws ಅಂತ ಸ್ಪೆಲಿಂಗ್ ತಪ್ಪು ಮಾಡಿದಾನೆ ಅಂತ ಒಬ್ಬರ ದೂರು !

ತಪ್ಪಲ್ಲ, ಮೇಧಾವಿ ಆ ಕ್ಲಾರ್ಕು.

6

ಬೋಳು ತಲೆ ಮತ್ತು ಬಿಳೀ ತಲೆ

—ಸುಮತೀಂದ್ರ ನಾಡಿಗ

ಬೋಳು ತಲೆಗಿಂತಲೂ ಬಿಳಿಯ ತಲೆ ಉತ್ತಮ
ಬೆಳುದಿಂಗಳಿನ ಹಾಗೆ ಕಾಣಬಹುದು
ಬಿಳಿಯ ತಲೆಗಿಂತಲೂ ಬೋಳು ತಲೆ ಉತ್ತಮ
ಮನೆಗೆ ಕನ್ನಡಿ ಯಾಕೆ ? ತಲೆಯೆ ಸಾಕು.

ಬೋಳು ತಲೆ ಬೋಳಾಗಿ ಬಿಳಿಯ ತಲೆ ಬಿಳಿದಾಗಿ
ನೂರು ತುಂಬುವ ತನಕ ಉಳಿಯಬಹುದು,
ಕಪ್ಪು ಕೂದಲು ಮಾತ್ರ ಬೆಳ್ಳಗಾಗಲೆ ಬೇಕು
ಅಥವಾ ಕೂದಲು ಉದುರಿ ಬೋಳಾಗಬೇಕು

ಬೋಳು ತಲೆಯಲ್ಲೀಗ ಮೊಳೆವ ಕೂದಲ ನಟ್ಟು
ಕೂದಲಿನ 'ಕ್ರಾಪ'ನ್ನು ಬೆಳೆಯಬಹುದು
ಬಿಳಿಯ ಕೂದಲಿಗೀಗ ಕಪ್ಪು ಬಣ್ಣವ ಹಚ್ಚಿ
ಕಪ್ಪು ಕೂದಲಿನಂತೆ ಮೆರೆಸಬಹುದು.

ಕಪ್ಪು ಕೂದಲಿನಿಂದ ಪಡ್ಡೆ ಹುಡುಗರ ಹಾಗೆ
ರಸಿಕ ಪೋಲಿಯ ಹಾಗೆ ಕಾಣಬೇಕೇಕೆ ?
ಬಿಳಿಯ ಕೂದಲಿನಿಂದ ಜ್ಞಾನ ವೃದ್ಧನ ಹಾಗೆ
ಸಭ್ಯನಾಗಿಯೆ ಕಂಡು ಇರಬಾರದೇಕೆ ?

ಸತ್ಯಕ್ಕೆ ಹೆದರದೆಯೆ ಬದುಕಬೇಕೇ ಹೇಳಿ
ಬಿಳಿ ಕೂದಲಿಗೆ ಬಣ್ಣ ಹಾಕಬೇಡಿ.
ಬಂದಂತೆ ಅನುಭವವ ಸ್ವೀಕರಿಸುವುದೆ ಮೇಲು
ಟೋಫನ್ನು ಬೋಳು ತಲೆ ಮುಚ್ಚದಿರಲಿ.


ಹಬ್ಬದ ದಿನಗಳು
ಹೆಚ್ಚಿಗೆ ಮಾಡಿ

ಅಪ್ರೂರ್ವ ಸಲಹೆ

—ಲೀಲಾ ಮಿರ್ಲೆ

ಡಾಕ್ಟರ ಶಾಪಿನಲ್ಲಿ ಕ್ಯೂ ಕಾಯುತ್ತಾ ಕುಳಿತಿದ್ದಾಗ ಪತ್ರಿಕೆಯೊಂದರ ಲೇಖನ ನನ್ನ ಗಮನವನ್ನು ಸೆಳೆಯಿತು. ನಿವೃತ್ತರಾದ ಗಂಡಂದಿರನ್ನು ನೋಡಿಕೊಳ್ಳುವ, ಸುಧಾರಿಸುವ ಬಗ್ಗೆ ಬರೆದ ಲೇಖನ ಅದು. ಲೇಖನದ ವಿಷಯವನ್ನು ಓದುತ್ತಿದ್ದ ಹಾಗೆ ಶಾಂತು ಚಿಕ್ಕಮ್ಮನ ಕಾರ್ಪಣ್ಯಗಳು ಸಿನೆಮಾ ಫ್ಲಾಷ್‌ಬ್ಯಾಕಿನಂತೆ ಮನಸ್ಸಿಗೆ ಬಂದವು.

ಚಿಕ್ಕಪ್ಪನಿಗೆ ಹೋದ ವರ್ಷ ತಾನೆ ರಿಟೈರ್ ಆಯಿತು. ಅಬ್ಬ, ಹಾಯಾಗಿ ಯಾರ ಹಂಗೂ ಇಲ್ಲದೆ ಇಷ್ಟ ಬಂದ ಕೆಲಸ ಮಾಡಿಕೊಂಡು, ಅಥವಾ ಕೆಲಸ ಮಾಡದೆ ಸುಖವಾಗಿರಬಹುದು ಅಂತ ಚಿಕ್ಕಪ್ಪ ಹಿಗ್ಗಿದರು. ಆದರೆ ಚಿಕ್ಕಮ್ಮನಿಗೆ ಒಂಥರಾ ಸಸ್ಪೆನ್ಸು. ಮದುವೆಯಾದಾಗಿನಿಂದ ಬೆಳಗ್ಗೆ ಎಂಟುಂ ಗಂಟೆಗೆ ಮನೆ ಬಿಟ್ಟು ಸಂಜೆ ಆರಕ್ಕೆ ಹಿಂತಿರುಗುತ್ತಿದ್ದ ಗಂಡ, ಈಗ ಧಿಡೀರನೆ 24 ಗಂಟೆಯೂ ಮನೆಯಲ್ಲೇ ಇದ್ದರೆ ಹೇಗೋ, ಏನೋ? ಏನೇನು ಅನಾಹುತ ಕಾದಿದೆಯೋ ಅಂತ ಚಿಕ್ಕಮ್ಮನಿಗೆ ಆತಂಕ. ಒಂದಿನ ಶಾಂತು ಚಿಕ್ಕಮ್ಮ ಸಿಕ್ಕಾಗ,

"ಹ್ಯಾಗಿದ್ದೀರಾ ಚಿಕ್ಕಮ್ಮ" ಎಂದೆ.

"ಇದೀನಿ, ಹೀಗೆ ರಿಟೈರ್ ಆದ ಗಂಡನ ಹೆಂಡತಿ ತರಹ" ಎಂದರು.

"ಏನ್ ಹಾಗಂದ್ರೆ, ಚಿಕ್ಕಪ್ಪಂಗೆ ರಿಟೈರ್ ಆದ್ರೆ ಏನಂತೆ. ಹಣಕ್ಕೇನು ಕೊರತೆ ಇಲ್ಲವಲ್ಲ ನಿಮಗೆ" ಎಂದೆ.

"ದುಡ್ಡಿನ ವಿಷ್ಯ ನಾನು ಹೇಳಲಿಲ್ಲ. ಇವರು ಸದಾ ಮನೇಲೇ ಇರ್ತಾರಲ್ಲಮ್ಮ. ಮಾಡಲು ಕೆಲಸವಿಲ್ಲ, ಏನಾದ್ರು ಪಜೀತಿ ಮಾಡ್ತಾನೇ ಇರ್ತಾರೆ. ಎಂದೂ ಅಡಿಗೆ ಮನೆಗೆ ಬರದವರು ಈಚೆಗೆ ಅಡುಗೆ ಮನೆ ಒಳಗೆಲ್ಲಾ ಬಂದ್‌ಬಿಡ್ತಾರೆ" ಅಂತ ಆಗ ಬಾರದ್ದು ಆದ ಹಾಗೆಹೇಳಿದರು ಚಿಕ್ಕಮ್ಮ.

"ಅಡುಗೆ ಮನೆಗೆ ಬಂದ್ರೆ ಏನಾಯ್ತು ಹೇಳಿ. ಅದೇನು ಅಂಥ ಪ್ರಮಾದವೇ ?" ಎಂದೆ.

"ಹಾಗಲ್ವೆ, ಆಫೀಸಿನಲ್ಲಿ ಎಲ್ಲರ ಮೇಲೂ ಜೋರು ಮಾಡಿ, ಇನ್ಸ್‌ಟ್ರಕ್ಷನ್ಸ್ ಕೊಟ್ಟು ಅಭ್ಯಾಸ ನೋಡು. ನನಗೆ ಗ್ಯಾಸ್ ಹ್ಯಾಗೆ ಉಳಿಸೋದು, ಡಬ್ಬಕ್ಕೆ ಹೆಸರಿನ ಚೀಟಿ ಅಂಟಿಸು, ಇತ್ಯಾದಿ ನೂರೆಂಟು ಥಿಯರಿಟಿಕಲ್ ಸಲಹೆಗಳನ್ನು ಕೊಡ್ತಾರೆ.

ಅದು ಸಾಧ್ಯವಿಲ್ಲ ಎಂದರೆ ಕೋಪ ಬರುತ್ತೆ. ವಾಗ್ವಾದ ಶುರು, ದಿನಾ ಜಗಳ" ಅಂತ ಪೇಚಾಡಿಕೊಂಡಿದ್ದರು.

ನೋಡೋಣ ಈ ಲೇಖನ ಚಿಕ್ಕಮ್ಮನಿಗೆ ಉಪಯೋಗವಾಗಬಹುದು ಅಂತ ಅಲ್ಲೇ ಓದಿದೆ.

"ನಿಮ್ಮ ಯಜಮಾನರು ನಿವೃತ್ತರಾದ ಮರುದಿನವೇ ಒಂದು ಮೊಪೆಡ್ ಕೊಳ್ಳಬೇಕು. ನಿಮ್ಮ ಮನೆಯಲ್ಲಿ ಕಾರು, ಸೈಕಲ್ಲು ಇತ್ಯಾದಿ ವಾಹನಗಳು ಇದ್ದರೂ ಸರಿ, ಇರದಿದ್ದರೂ ಸರಿ. ಮೊಪೆಡ್ ಕೊಳ್ಳುವುದು ಅತ್ಯಗತ್ಯ. ಹೇಗೂ ಅವರಿಗೆ ಬಿಡುವು ಇರುವುದರಿಂದ ಇನ್ನು ಮೇಲೆ ಸಣ್ಣ ಪುಟ್ಟ ಸಾಮಾನುಗಳನ್ನು ತರುವ ಕೆಲಸವನ್ನು ಅವರಿಗೆ ವಹಿಸಿ, ಆಗ ಈ ಮೊಪೆಡ್ ಸಹಕಾರಿ, ಆದರೆ ಈ ವಾಹನದ ಉಪಯೋಗ ಕೇವಲ ಪೇಟೆಗೆ ಹೋಗಿಬರುವುದಕ್ಕೆ ಸೀಮಿತವಾಗಿಲ್ಲ. ಮನುಷ್ಯನ ಬಾಳಿನಲ್ಲಿ ಸಂದಿಗ್ಧ ಪರಿಸ್ಥಿತಿ ಒದಗಿದಾಗ, ಕಾಲ, ನಿಸರ್ಗದ ನಿಯಮವನ್ನು ಅನುಸರಿಸದೆ ನಿಂತೇ ಬಿಟ್ಟಿತೇನೋ ಎಂಬ ಭಾವನೆ ನಿವೃತ್ತ ಮಾನವನನ್ನು ಕಾಡಿದಾಗ, ಕೈ ಕೊಟ್ಟು (!) ಸಹಾಯ ಮಾಡುವ ಮಿತ್ರ, ಮೋಪೆಡ್.

ಹೊಸ ವಾಹನವನ್ನು ಕೊಂಡ ಅನಂತರ ಒಂದು ದಿನ ಬ್ರೆಡ್ಡೋ, ಬಾಳೆ ಹಣ್ಣೋ ತರಲು ಹೇಳಿ. ಕೆಲಸ ಅವರಿಗೆ ಅಷ್ಟು ಆಕರ್ಷಕವಾಗಿ ಕಾಣದಿದ್ದರೂ, ಹೊಸ ವಾಹನವನ್ನು ಬಳಸುವ ಖುಷಿಯಿಂದ ನಿಮ್ಮವರು, ಪೇಟೆಗೆ ಹೊರಡುತ್ತಾರೆ. ಈ ಮಹಾನ್ ಶಕ್ತಿಯುಳ್ಳ ವಾಹನ ದಾರಿಯಲ್ಲಿ ಧಿಡೀರ್ ಎಂದು ನಿಂತು ಬಿಡುತ್ತದೆ. ಆಗ ತಾನೆ ಪೆಟ್ರೋಲ್ ಹಾಕಿಸಿದ್ದರೂ, ಅದು ಮೊಂಡಾಟ ಮಾಡಿ, ಜಪ್ಪಯ್ಯ ಎಂದರೂ ಸ್ಟಾರ್ಟ್ ಆಗುವುದಿಲ್ಲ. ನೂಕಿಕೊಂಡು ಹತ್ತಿರದ ರಿಪೇರಿ ಅಂಗಡಿಗೆ ಹೋಗುತ್ತಾರೆ, ಅಲ್ಲಿರುವ ಚೋಟುದ್ದ ಹುಡುಗ ಅದೂ ಇದೂ ನೋಡಿ, ಸ್ಪಾರ್ಕ್ ಪ್ಲಗ್ ಬ್ಲಾಕ್ ಆಗಿದೆ ಎಂದು ಹೇಳಿ, ಅದನ್ನು ಕ್ಲೀನ್ ಮಾಡಿಕೊಡುತ್ತಾನೆ. ಮೊಪೆಡ್ ಓಡಲು ಮನಸ್ಸು ಮಾಡುತ್ತದೆ. ಬೆಳಗ್ಗೆ 9 ಗಂಟೆಗೆ ಹೊರಟ ನಿಮ್ಮವರು, ಮೊಪೆಡ್ಡಿನ ಆರೋಗ್ಯವನ್ನು ಸುಧಾರಿಸಿಕೊಂಡು ಬರಲು 12 ಗಂಟೆಯಾಗುತ್ತದೆ. ಬಿಸಿಲು, ಆಯಾಸ, ಉಂಡು ಮಲಗಿದರೆ ದಿವನಾಗಿ ನಿದ್ದೆ ಬರುತ್ತೆ. ಬೆಳಗ್ಗೆ ಕಾಲ ಕಳೆದಿದ್ದೆ ಅವರಿಗೆ ತಿಳಿಯುವುದಿಲ್ಲ. ನಿಮಗೆ ಪೂರ ಆರಾಮ !

ಸ್ಪಾರ್ಕ್ ಪ್ಲಗ್ಗನ್ನು ಕ್ಲೀನ್ ಮಾಡುವ ಒಳಗುಟ್ಟನ್ನು ಅರಿತ ನಿಮ್ಮವರು ಇನ್ನೊಂದು ದಿನ ಅದರ ಸವಾರಿಗೆ ಹೊರಡುತ್ತಾರೆ. ಮಧ್ಯ ದಾರಿಯಲ್ಲಿ ಸಂಪು ಹೂಡುತ್ತದೆ. ಈ ದ್ವಿಚಕ್ರವಾಹನ. ಹೊಸದಾಗಿ ಕಲಿತ ವಿದ್ಯೆಯನ್ನು ಉಪಯೋಗಿಸಲು ಪ್ರಯತ್ನಿಸುತ್ತಾರೆ ನಿಮ್ಮವರು. ಛೆ! ಪ್ಲಗ್ ಸ್ವಚ್ಛವಾಗೇ ಇರುತ್ತೆ. ಮತ್ತೆ

ಅವನ್ನು ಎರಡು ಕಿಲೋಮೀಟರ್ ದಬ್ಬಿಕೊಂಡು ಮೊದಲು ಸಿಕ್ಕುವ ಮೆಕ್ಯಾನಿಕ್‌ನ ಸಹಾಯ ಯಾಚಿಸುತ್ತಾರೆ. ಅವನು ಅದನ್ನು ಒಂದು ನಿಮಿಷ ಪರೀಕ್ಷಿಸಿ, "ಏನೂ ಆಗಿಲ್ಲ ಸಾರ್, ಕಾರ್‌ಬ್ಯುರೇಟರ್‌ನಲ್ಲಿ ನೀರು ಸೇರಿದೆ ಅಷ್ಟೆ" ಎಂದು ಹೇಳಿ, ಒಂದು ಕೊಳೆ ಬಟ್ಟೆಯಿಂದ ಕಾರ್‌ಬ್ಯುರೇಟರಿನ ಮೇಲಿನ ನೀರನ್ನು ಒರೆಸುತ್ತಾನೆ. ಮೊಪೆಡ್ ಖುಷಿಯಾಗಿ ಓಡಲು ಪ್ರಾರಂಭಿಸುತ್ತವೆ.

ಇಷ್ಟು ಹೊತ್ತಿಗೆ ನಿಮ್ಮವರಿಗೂ ಆ ಮೊಪೆಡಿಗೂ ಒಂದು ತರಹ 'ಲವ್-ಹೇಟ್ ಸಂಬಂಧ' ಶುರುವಾಗಿ ಬಿಟ್ಟಿರುತ್ತದೆ. ಇಷ್ಟೆಲ್ಲಾ ವರ್ಷ ಎಂಥೆಂತಹ ಕಡೆ ಕೆಲಸ ಮಾಡಿ ಎಂಥೆಂತಹ ಬಾಸುಗಳಿಗೆ ಮಣ್ಣು ತಿನ್ನಿಸಿದೀನಿ, ಅಂತಹಂದರಲ್ಲಿ ನನ್ನಂಥವನಿಗೆ ಈ ಮೊಪೆಡ್ ನಡುರಸ್ತೇಲಿ ಕೈ ಕೊಟ್ಟು ರೇಗಿಸುತ್ತಲ್ಲಾ! ಅದನ್ನ ಖಂಡಿತ ಅರ್ಥ ಮಾಡಿಕೊಳ್ಳಬೇಕು, ದಾರಿಗೆ ತರಬೇಕು ಎನ್ನುವ ಚ್ಯಾಲೆಂಜ್ ಅವರಲ್ಲಿ ಬೇರೂರುತ್ತದೆ.

ಈ ಪಣ ತೊಟ್ಟ ಮರುದಿನವೇ, ಮೊಪೆಡ್ ಅವರ ಮನಸ್ಸನ್ನು ಅರಿತಿದೆಯೋ ಎನ್ನುವಂತೆ, ಮನೆಯಿಂದ ಹೊರಡುವುದಕ್ಕೇ ನಿರಾಕರಿಸುತ್ತದೆ. ಸ್ಟಾರ್ಟ್ ಆದರೂ ವಾಹನ ಎಳೆಯಲಾರದೆ ನಿಂತೇಬಿಡುತ್ತದೆ. 'ಇದಕ್ಕೇನು ಬಂತು ದರಿದ್ರ' ಎಂದು ಶಪಿಸುತ್ತಾ, ಅದನ್ನು ಅಲ್ಲೇ ಬಿಟ್ಟು ಮೆಕ್ಯಾನಿಕನ್ನು ಕರೆತರಲು ಹೊರಡುತ್ತಾರೆ. (ಇಂತಹ ದಿನ ನಿಮಗೆ ಪೂರಾ ರಜ. ಮುಖ್ಯವಾದ ಕೆಲಸವೇನಿದ್ದರೂ ತಕ್ಷಣ ಪ್ರಾರಂಭಿಸಿ.) ಮೆಕ್ಯಾನಿಕ್ ಮನೆಗೆ ಬರುವುದೆಂದರೆ ಸುಮ್ಮನಾಯಿತೇ ? ಆ ಮಹಾಪುರುಷನನ್ನು ಮನೆಗೆ ಬರಲು ಹೇಳಿದರೆ "ನೀವು ಹೋಗಿ ಸಾರ್, ನಾನು ನಿಮ್ಮ ಹಿಂದೇನೇ ಬರ್ತೀನಿ" ಅಂತ ಹೇಳಿ ನಿಮ್ಮನ್ನು ಸಾಗಹಾಕಿದ್ದ ನಿಮಿಷದಲ್ಲೇ ನಿಮ್ಮನ್ನು ಮರೆತು ಬಿಡುತ್ತಾನೆ. ಇದನ್ನು ಅನುಭವದಿಂದ ಅರಿತ ನಿಮ್ಮ ಯಜಮಾನರು ಅವನನ್ನು ಆಟೋದಲ್ಲೋ, ಸೈಕಲ್ ಮೇಲೋ ಕೂರಿಸಿಕೊಂಡು ಮನೆಗೆ ಬರುತ್ತಾರೆ. ದ್ವಿಚಕ್ರ ಸರ್ವಜ್ಞನಾದ ಅವನು ಒಂದು ನಿಮಿಷ ಪರಿಶೀಲಿಸಿ, "ಜೆಟ್ ಬ್ಲಾಕ್ ಆಗಿದೆ", ಅಂತ ಹೇಳಿ ಒಂದು ತಂತೀಲಿ ಅದನ್ನು ಚುಚ್ಚಿ, ಹಣ ವಸೂಲಿ ಮಾಡಿಕೊಂಡು ಹೋಗುತ್ತಾನೆ.

ಈ ಒಂದು ಸಣ್ಣ ದ್ವಿಚಕ್ರ ವಾಹನಕ್ಕೆ ಎಷ್ಟೊಂದು ತರಹದ ಕಾಯಿಲೆಗಳು ಬರಬಹುದು ಎನ್ನುವ ವಿಷಯ ಅವರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ. ಅಷ್ಟೆ ಅಲ್ಲ. ಮನುಷ್ಯ ಎಷ್ಟು ಕಲಿತರೂ ಕಲಿಯುವುದು ಇನ್ನೂ ಇದೆ ಎನ್ನುವುದನ್ನು ಮನದಟ್ಟು ಮಾಡಿ, ಯಜಮಾನರ "ಅಹಂ" ಅನ್ನು ಇಳಿಸಲು ಇದು ತುಂಬ ಸಹಕಾರಿಯಾಗುತ್ತದೆ. ಯಂತ್ರಗಳ ಬಗ್ಗೆ ತಿಳದುಕೊಳ್ಳುವ ಕುತೂಹಲ ಕೆರಳಿ, ಲೈಬ್ರರಿಗಳಿಗೆ ಹೋಗುವ ಅಭ್ಯಾಸ ಶುರುವಾಗಬಹುದು.

ಓೀಗೆ ನೀವು ಯೋಚಿಸಿ ಮುಂಜಾಗ್ರತಾ ಕ್ರಮವನ್ನು ಕೈಗೊಂಡರೆ, ನಿಮ್ಮ ವರು ನಿವೃತ್ತರಾದ ಮೇಲೂ ನಿಮ್ಮ ಸ್ವಾತಂತ್ರ್ಯ/ಶಾಂತಿ/ಆರಾಮಗಳಿಗೆ ಯಾವ ಅಡ್ಡಿಯೂ ಬರುವುದಿಲ್ಲ."

ಈ ಮಹಿಳೆಯರ ಮಾಸಪತ್ರಿಕೆಯನ್ನು ಕೊಂಡು ಚಿಕ್ಕಮ್ಮನಿಗೆ ಕೊಡಬೇಕು. ಹೇಗೂ ಚಿಕ್ಕಪ್ಪ ಇದನ್ನ ಓದಲ್ಲ, ಮಹಿಳೆಯರ ಪತ್ರಿಕೆ ನೋಡಿ !

"ಐದು ವರ್ಷ ಆಯ್ತು ನೀನು ಆ ಮರಾಠಿ ಹುಡುಗೀನ ಮದುವೆ ಆಗಿ.

ಇನ್ನೂ ಅವಳ ಹತ್ರ ಕನ್ನಡದಲ್ಲಿ ಮಾತಾಡಲ್ವೇನೋ ?"

"ಇಲ್ಲ"

"ಮತ್ತೆ ಮರಾಠಿ ಕಲ್ತಿದೀಯಾ ?"

"ಇಲ್ಲ"

"ಇಂಗ್ಲೀಷಲ್ಲಿ ಮಾತಾಡ್ತೀಯಾ ಹಾಗಾದ್ರೆ ?"

"ಇಲ್ಲ"

"ಮತ್ಯಾವ ಭಾಷೆಲಿ ಮಾತಾಡ್ತೀಯೋ ?"

"ಮಾತಾಡಕ್ಕೆ ಅವಳು ಬಿಟ್ರೆ ತಾನೆ !"

ಒಂದು ಸತ್ಯ ಕಥೆ

— ದುರ್ಗಾ

"ಅಮ್ಮಾ, ಮಗು ಬಟ್ಟೆ ಬದ್ಲಾಯಿಸಬೇಕು. ದೀಪ ಹಾಕ್ತೀಯಾ ?" ಮಗಳು ಕೂಗಿದ್ಳು.

"ಬಂದೆ" ಎನ್ನುತ್ತಾ ಎದ್ದು ದೊಡ್ಡ ದೀಪ ಹಾಕ್ದೆ. ಹಾಕಿದ ಎರಡು ನಿಮಿಷಕ್ಕೆ ಚಕ್ ಅಂತ ದೀಪ ಹೋಯಿತು.

"ಬಲ್ಬು ಹೋಯ್ತು, ಇಲ್ಲಾ ಕರೆಂಟೋ ?"

"ಕರೆಂಟು ಕಣಮ್ಮಾ, Night lampಊ ಹೋಗಿದೆ. ಬೇಗ torch ಕೊಡು ಮಗು ಹೆದರುತ್ತೆ" ಅಳುತ್ತಿದ್ದ ಮಗುವನ್ನು ಸುಧಾರಿಸುತ್ತಿದ್ಳು.

"ಹೂಂ ಕಣಮ್ಮಾ. ಆ ಹಾಳು torchನ ಎಲ್ಲಿಟ್ಟಿದ್ದೆ ಹೇಳು" ಕತ್ತಲಲ್ಲಿ ಅದಕ್ಕಾಗಿ ತಡಕಾಡಿದೆ. ಸದ್ಯ ಸಿಕ್ಕಿತು. ಮಗೂಗೆ ಬೇರೆ ಬಟ್ಟೆ ಕೊಟ್ಟು, ಟೈಮ್ ನೋಡ್ದೆ. ಮೂರೂವರೆ. ಬೆಳಗಾದರೆ ಮಗೂಗೆ ನಾಮಕರಣದ ಶಾಸ್ತ್ರ, ಬೇಗ ಬಾಯಿಲರ್ switch ಹಾಕಿದ್ರೆ ಕರೆಂಟು ಬಂದಾಗ ಕಾಯಲಿ; ಅಡಿಗೆಯೋರು, ಕೆಲ್ಸದೋರು ಬರೊ ಹೊತ್ಗೆ ನೀರು ಕಾದಿರುತ್ತೆ ಎಂದ್ಕೊಂಡು switch ಹಾಕ್ದೆ.

"ಅಮ್ಮಾ, ಹಂಡೇಗೆ ಉರಿ ಹಾಕ್ಬೇಕೊಂತ ಕಾಣುತ್ತೆ. ದೀಪ ಹೋಗುಕ್ಕೆ ಮೊದ್ಲು 'ಛಟ್ ಛಟಿಲ್' ಅಂತ ಸದ್ದಾಯ್ತು. ಬಹುಶಃ ರಸ್ತೆ ಮೂಲೇಲಿರೊ ಟ್ರಾನ್ಸ್‌ಫಾರ್ಮರ್ ಇರ್ಬಹುದು. ಬೇಗ ಕರೆಂಟು ಬರೋ ಆಸೆ ಇಟ್ಕೊಬೇಡ" ಮಗು ಮಲಗಿಸ್ತಾ ಮಗಳು ಹೇಳಿದಳು.

"ದೇವ್ರೇ ಗತಿ. ಏನಾದ್ರೂ ಒಂದು ವಿಶೇಷ ಅಂದ್ರೆ ಸಾಕು–ಕಾದಿರುತ್ತೆ ತಾಪತ್ರಯಗಳು. ದೀಪವಿದ್ದರೆ ನೀರಿಲ್ಲ, ಎರಡೂ ಇದ್ರೆ ಹಾಲಿನ strike....ಬೆಳಗಾಗೆದ್ದರೆ ಈ ಗೋಳು ಕರೆ ತಪ್ಪಿದ್ದಿಲ್ಲ", ಒಟಗುಟ್ಟುತ್ತಾ ಇದ್ದೆ.

ಫ್ರಿಡ್ಜ್, ಫ್ಯಾನ್, ಇಸ್ತ್ರಿ ಪೆಟ್ಟಿಗೆ, ಮಿಕ್ಸಿ, ಬಾಗಿಲ ಕರೆಗಂಟೆಯಿಂದ ಹಿಡಿದು ಎಲ್ಲಾ electrically operated ಕೈ ಕತ್ತರಿಸಿದ ಹಾಗೆ ಆಗುತ್ತೆ ಕರೆಂಟು ಇಲ್ದೆ ಇದ್ರೆ. ಈಗಂತೂ ಸೊಳ್ಳೆ ಓಡಿಸೋಕ್ಕೂ ಕರೆಂಟು ಬೇಕು. ಬೆಳಗಾದ ಕೂಡ್ಲೆ phone ಮಾಡ್ಬೇಕು. ಇನ್ನೂ ಸದ್ಯ ಅದಕ್ಕೂ ಕರೆಂಟು ಬೇಕಾಗಿಲ್ಲ.

ಆರೂವರೆಗೆ ಸರಿಯಾಗಿ ನಮ್ಮ ಬಡಾವಣೆ ಕೆ.ಇ.ಬಿ. ಆಫೀಸಿಗೆ phone ಮಾಡ್ದೆ. ಇಪ್ಪತ್ತು ನಾಲ್ಕು ಘಂಟೆ ಸರ್ವಿಸ್ ಇರಬೇಕಾದ್ದು ಐದು ನಿಮಿಷವಾದರೂ ಯಾರೂ ಎತ್ತಲಿಲ್ಲ. ಕಡೆಗೊಮ್ಮೆ ಆ ತುದಿಯಿಂದ ಧ್ವನಿ ಬಂತು.

''ಯಾರೂ?....'' ಯಾರೋ ಆಕಳಿಸುತ್ತಾ ಕೇಳಿದ್ರು.

"K.E.B. electric supply breakdown service ಏ ಅದು ?''
''ಔದಮ್ಮಾ, ಯಾರ್ಬೇಕು ನಿಮ್ಗೆ?" ನಿಧಾನವಾಗಿ ಎಚ್ಚರಗೊಂಡು ಆತ ಕೇಳಿದ.
''ಯಾರೂ ಬೇಡಾಪ್ಪಾ. ನಮ್ಮ ಈ ಸೆಕೆಂಡ್ ಬ್ಲಾಕಿನಲ್ಲಿ ನೆನ್ನೆ ರಾತ್ರಿ ಮೂರುವರೆಯಿಂದ ದೀಪ ಹೋಗಿದೆ.....''

''ಸ್ಸ....ರಿ. ನಿಮ್ಮನೆ ಒಂದ್ರಲ್ಲೇ ಓಗಿದ್ಯೋ ಇಲ್ಲಾ ಎಲ್ಲಾ ಕಡೆನೂ ಓಗಿದ್ಯೋ"?

''ಎಲ್ಲಾ ಕಡೆನೂ ಹೋಗಿರಬೇಕಪ್ಪಾ. ಯಾಕೇಂದ್ರೆ........"

''ಅಂಗೆ ಓಗಿದ್ರೆ ಬಂದೇ ಬರುತ್ತೆ ಬುಡಿ........''

"ನೋಡಪ್ಪಾ, ಮನೇಲಿ ಇವತ್ತು ಔತಣವಿದೆ. ದಯವಿಟ್ಟು ಸ್ವಲ್ಪ ಬೇಗ attend ಮಾಡ್ಬೇಕು.''

''ಆಗ್ಲಿ ಆಗ್ಲಿ. ಮಾಡೋಣಂತೆ. Complaint bookನಲ್ಲಿ ಬರೀತೀನಿ....''

'ನಮ್ಮ ಮೂರನೇ ಕ್ರಾಸಿನಲ್ಲಿ ಇರೋ transformerನಲ್ಲಿ ಹೋಗಿರ್ಬಹುದು'....

''ಅಂ. ಏನಂದ್ರಿ. ನೀವೇನು ಮಾಡಿದ್ರಿ ಅಲ್ಲಿ''

''ನಾನೇನೂ ಮಾಡ್ಲಿಲ್ಲಾಪ್ಪಾ ಸಧ್ಯ........"

''ಮತ್ತೆ ನಿಮ್ಗೆ ಹ್ಯಾಗೆ ಗೊತ್ತು ಅಲ್ಲೇ ಓಗಿದೆ ಅಂತ, ನೀವು ಏನೋ ಮಾಡೇ ಇರ್ಬೇಕು. ನಿಮ್ಮನೆ ಅಡ್ರೆಸ್ಸು, ಎಸ್ರು, ಟೆಲಿಫೋನ್ ನಂಬ್ರು ಎಲ್ಲಾ ಕೊಡಿ...."

'ಟಪ್'' ಅಂತ receiver ಕುಕ್ಕಿದೆ. ಬೀದೀಲಿ ಹೋಗೋ ಮಾರೀನ ಮನೆ ಹೊಕ್ಕು ಹೋಗು ಅಂದ್ಹಾಗೆ ಆಯ್ತು ಅಂದ್ಕೊಂಡು ಕೆಲಸಕ್ಕೆ ಸೊಂಟ ನೆಟ್ಟಗೆ ಮಾಡಿಕೊಂಡು ಹೊರಟೆ.



''ಇನ್ನು ಮೇಲೆ ಕಡುಬು ಕೊಟ್ಟು ವಿಘ್ನಗಳನ್ನ ನಿವಾರಿಸಿಕೊಳ್ಳೋದಕ್ಕೆ ಆಗೋದಿಲ್ಲ. ಸ್ವರ್ಗದಲ್ಲೂ ಲಂಚ ನಿರೋಧ ಕಾನೂನು ಜಾರಿಗೆ ಬರುತ್ತಂತೆ''

ಅರಿಯದ ಅಮೆರಿಕನ್

— ಆರ್. ಕೆ. ಲಕ್ಷ್ಮಣ್

ನನ್ನ ಗೆಳೆಯನೂ, ಸಂಭಾವಿತನೂ ಆದ ಅಮೆರಿಕನ್ ಒಬ್ಬನಿಗೆ, ಹೊಸ ವರ್ಷಕ್ಕೆ ನನಗೇನಾದರೂ ಉಡುಗೊರೆ ಕೊಡಬೇಕೆನಿಸಿರಬೇಕು. ರಸ್ತೆಯಂಚಿನಲ್ಲಿದ್ದ ಅಂಗಡಿಯೊಂದಕ್ಕೆ ನಡೆದು 'ಪ್ಲೇಬಾಯ್' ಪತ್ರಿಕೆಯ ದಪ್ಪ ಪ್ರತಿಯೊಂದನ್ನು ಖರೀದಿಸಿ, ಭಾರತದಲ್ಲಿದ್ದ ನನಗಾಗಿ ಅಂಚೆಯ ಮೂಲಕ ರವಾನಿಸಿಬಿಟ್ಟ.

ಈ ಪತ್ರಿಕೆಯಲ್ಲಿನ ಪ್ರಮುಖ ಅಂಶವೆಂದರೆ, ಲಾಲಿಸಿ ರಮಿಸಿ ತೆಗೆದ, ನಗ್ನ ಯುವತಿಯರ ಹೊಳಪಿನ ಚಿತ್ರಗಳೆಂಬುದು ಎಲ್ಲರಿಗೂ ಗೊತ್ತು. ಈ ಹೆಣ್ಣು ಮಕ್ಕಳು ಬೀಚು, ಈಜು ಕೊಳ, ಸುಪ್ಪತ್ತಿಗೆಗಳಂತಹ ಶ್ರೀಮಂತ ಹಿನ್ನೆಲೆಯಲ್ಲಿ ಚಿತ್ರ ತೆಗೆಸಿಕೊಂಡಿದ್ದರೂ, ಯಾಕೋ ಬೇಸರಗೊಂಡ ಆತ್ಮಹೀನರಂತೆ ಕಾಣುತ್ತಾರೆ.

ನಮ್ಮ ದೇಶದಲ್ಲಿ ಖಜುರಾಹೋ, ಕೋಣಾರ್ಕ್‌ಗಳಲ್ಲಿರುವ ಮಹನೀಯರ ಮತ್ತು ಮಹಿಳೆಯರ ಶಿಲ್ಪಗಳಿಗೆ ನಾವು ಕೊಟ್ಟಿರುವ ಪವಿತ್ರ ಸ್ಥಾನಮಾನದಂತೆ, ಅಮೆರಿಕದಲ್ಲಿ ಈ ಪತ್ರಿಕೆಗೆ 'ಕಲಾತ್ಮಕತೆ'ಯ ಸ್ಥಾನಮಾನವಿದೆ.

ಪ್ಲೇಬಾಯ್ ಪತ್ರಿಕೆಯನ್ನು ಇತರ ಗಂಭೀರ ಪತ್ರಿಕೆಗಳಿಗೆ ಸರಿಸಮವಾಗಿ, ಬಹಿರಂಗವಾಗಿ ಅಂಗಡಿಗಳಲ್ಲಿ ತೂಗುಹಾಕಿರುವುದನ್ನು ನಾನು ನೋಡಿದ್ದೇನಾದರೂ, ಚಿಕ್ಕಂದಿನಿಂದ ಇಂದಿನವರೆಗೆ ಎಂದೂ ಈ ಪತ್ರಿಕೆಯನ್ನು 'ಓದಿಲ್ಲ'.

ನನ್ನ ಅಮೆರಿಕದ ಗೆಳೆಯ ನನಗಾಗಿ ಕಳಿಸಿ ಉಪಕಾರ ಮಾಡಿದ ಈ ಉಡುಗೊರೆಯ ಬಗ್ಗೆ ಅರಿಯದೇ ನಾನು ಖುಷಿಯಿಂದಿದ್ದೆ. ಆ ಉಡುಗೊರೆ ಅಮೆರಿಕೆಯಿಂದ ಭಾರತದೆಡೆಗೆ ಸಮುದ್ರಗಳನ್ನು ದಾಟಿ ಬರುತ್ತಿದ್ದ ಕಾಲದಲ್ಲಿ ನಾನಿಲ್ಲಿ ಕಾನೂನು ಪಾಲಿಸುವ ಗೌರವಾನ್ವಿತ, ಅಮಾಯಕ ಪ್ರಜೆಯ ಜೀವನವನ್ನು ಮುಂದುವರೆಸಿದ್ದೆ.

ಆ ಪತ್ರಿಕೆ ನಮ್ಮ ಕಡಲನ್ನು ತಲುಪಿರುವ ವಿಷಯ ನನಗೆ ಕಡೆಗೂ ಒಂದುದಿನ, ಅನಿರೀಕ್ಷಿತವಾಗಿ ಪ್ರೊಸ್ಟರ್ ಅಪ್ರೇಸಲ್ ಡಿಪಾರ್ಟ್‌ಮೆಂಟಿನಿಂದ ಬಂದ ಪತ್ರದ ಮೂಲಕ ತಿಳಿಯಿತು! ಅಶ್ಲೀಲ ಸಾಹಿತ್ಯ ಆಮದು ಮಾಡಿಕೊಂಡ ಹೀನ ಅಪರಾಧ ವನ್ನು ನಾನು, 1962ರ ಕಸ್ಟಮ್ಸ್ ಆಕ್ಟ್‌ನ 11ನೆಯ ಸೆಕ್ಷನ್ ಪ್ರಕಾರ ಎಸಗಿದ್ದೆ. ಈ ಅಪರಾಧ ಎಸಗಿದ್ದಕ್ಕೆ ನನ್ನ ಮೇಲೆ ಏಕೆ ಕ್ರಮ ಕೈಗೊಳಬಾರದೆಂಬುದಕ್ಕೆ ಕಾರಣ ಕೋರಿ ಆ ಪತ್ರ ಬರೆದಿದ್ದರು.

ಇಂಥ ಒಂದು ಸರಕಾರಿ ವಿಭಾಗವಿರುವುದರ ಅರಿವೇ ಇಲ್ಲದ, ಪ್ರಾಮಾಣಿಕ ವ್ಯಕ್ತಿಯಾಗಿರುವ ನಾನು, ಈ ಮೂಲದಿಂದ ಬಂದ ಪತ್ರ ನೋಡಿ ಬೆವರಿದೆ. ನನ ಊಹೆ ಅವರು ಕೊಡಬಹುದಾದ ಅತ್ಯಂತ ಸರಳ ಶಿಕ್ಷೆಯಿಂದ, ಬೇಯುವ ಎಣ್ಣೆ ಯಲ್ಲಿ ಹುರಿವ, ಹಸಿದ ಮೊಸಳೆಗಳ ಹಳ್ಳಕ್ಕೆ ತಳ್ಳುವಂತಹ ವಿಸ್ತೃತ ಶಿಕ್ಷೆಗಳವರೆಗೂ ಒಮ್ಮೆ ಹರಿದಾಡಿತು.

ಇದೇ ಭೀತಿಯಲ್ಲಿ ಕೆಲ ಸಂಬಿಕಸ್ಥ ಸ್ನೇಹಿತರ ಬಳಿ ಸಹಾಯ ಸಲಹೆಗಳಿಗಾಗಿ ನಾನು ಹೋದೆ. ಕೀಳಾಗಿ ಕಂಡು ಬರುತ್ತಿದ್ದ ಆ ಹಳದಿ ಕಾಗದದತ್ತ ಒಂದು ಕ್ಷಣ ಗಂಭೀರವಾಗಿ ದಿಟ್ಟಿಸಿ, ಆನಂತರ ಅವರು ತುಂಟತನದಲ್ಲಿ ಸಿಕ್ಕಿಬಿದ್ದ ಪುಟ್ಟ ಹುಡುಗ ನನ್ನು ನೋಡುವಂತೆ ವಿಚಿತ್ರ ಆಶ್ಚರ್ಯದಿಂದ ನನ್ನನ್ನು ನೋಡುತ್ತಿದ್ದರು. ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವುದು ಹೇಗೆಂದು ನನಗೆ ಹೇಳುವುದರ ಬದಲಿಗೆ, ಆ ಪತ್ರಿಕೆಯ ಹಳೆಯ ಸಂಚಿಕೆಗಳಿಗಾಗಿ ನಿಗೂಢ ದನಿಯಲ್ಲಿ ನನ್ನನ್ನು ಕಾಡತೊಡಗಿ ದರು.

ಕಡೆಗೆ ನಾನು ಅಪ್ರೇಸಿಂಗ್ ಡಿಪಾರ್ಟ್‌ಮೆಂಟಿಗೇ ಹೋಗಿ, ಶಿಕ್ಷೆಯಾಗದಿರಲು ಕಾರಣವನ್ನು ಹೇಗೆ ತೋರಿಸಬೇಕೆಂದು ಅವರನ್ನೇ ಕೇಳಿದೆ. ನಾನು ನಿಜಕ್ಕೂ ಅಪರಾಧಿಯಲ್ಲವಾದಲ್ಲಿ, ಈ ವಿಷಯದ ಬಗ್ಗೆ ನನಗೆ ಸಂಪೂರ್ಣ ಅಜ್ಞಾನವಿದೆ ಎಂದು ಬೇಡಿಕೊಳ್ಳಬಹುದೆಂದು ಸಲಹೆ ಇತ್ತರು. ಈ ಸರಳೋಪಾಯ ಕೇಳಿ ತುಂಬಾ ನಿರಾಳವಾದಂತವನಾಗಿ, ಪ್ಲೇಬಾಯ್ ಎಂಬ ಪತ್ರಿಕೆಯ ಬಗೆಗಲ್ಲದೇ ಅದನ್ನು ರವಾನಿಸಿದ ವ್ಯಕ್ತಿಯ ಅಸ್ತಿತ್ವದ ಬಗೆಗೂ ನನಗೇನೇನೂ ತಿಳಿದಿಲ್ಲವೆಂದು, ಇನ್ನೂ ಬೇಕಾದರೆ ಅಮೆರಿಕವೆಂಬ ದೇಶವಿರುವುದೇ ನನಗೆ ಗೊತ್ತಿಲ್ಲವೆಂದು ತಿಳಿಸಲು ಸಿದ್ಧನಿದ್ದೇನೆಂದು ಆ ಅಧಿಕಾರಿಗೆ ಹೇಳಿದೆ.

ಕಾಲ ಕಳೆದಂತೆ, ಈ ಘಟನೆಯಿಂದ ದೂರ ನಿಂತು, ಅದರಲ್ಲಿನ ವ್ಯಂಗ್ಯ ನೋಡಿ, ಖುಷಿಪಡುತ್ತಾ, ಸ್ನೇಹಿತರೊಂದಿಗೂ ಈ ಘಟನೆಯನುಭವಗಳನ್ನು ಹಂಚಿಕೊಳ್ಳುತ್ತಾ ದೇಶದ ಕಾನೂನಿನ ವೈಚಿತ್ರ್ಯದ ಬಗ್ಗೆ ಲೇವಡಿ ಮಾಡುತ್ತಾ ಆರಾಮವಾಗಿದ್ದೆ.

ಹತ್ತಿರ ಹತ್ತಿರ, ಒಂದು ವರ್ಷ ಕಳೆದ ಮೇಲೆ, ಮರೆತ ಸಿನೇಮಾ ನೆನಪಿನಲ್ಲಿ ಮಂಜಾದ ಹಾಗೆ ಆ ಘಟನೆಯೂ ಮಂಜಾಗುತ್ತಿದ್ದಾಗ ಒಂದು ಪತ್ರ ಬಂತು. ಮೈ ತಣ್ಣಗಾಗಿಸುವ ಕೆಲ ಪರಿಚಿತ ಸಾಲುಗಳನ್ನು ಅದರೊಳಗೆ ನೋಡಿದಾಗ ನನಗೆ ಆಘಾತವಾಯಿತು—'ಕಾನೂನು ಕ್ರಮ....ಪ್ಲೇಬಾಯ್....ನಿಷಿದ್ಧ ವಸ್ತುಗಳು.... ಸೆಕ್ಷನ್ 11 (ಡಿ) ...

ಉತ್ತಮ ನಡವಳಿಕೆಯ ಜನರ ನಡುವೆ ಜೀವಿಸುತ್ತಿರುವ ಅಶ್ಲೀಲ ಮನಸ್ಸಿನ ಆರೆ ಹುಚ್ಚನೆಂದು ನನಗೆ ಅವಮಾನಕರವಾದ ಶಿಕ್ಷೆ ವಿಧಿಸಿಯೇ ತೀರುತ್ತಾರೆಂದು ನಾನು ನಿರ್ಧರಿಸುವಷ್ಟರಲ್ಲಿ, ನನಗೆ ಪತ್ರದ ಕಡೆಯ ಸಾಲು ಕಾಣಿಸಿತು—ನನ್ನ ವಿವರಣೆಯನ್ನು ಅವರು ಸ್ವೀಕರಿಸಿ, ನಿಷಿದ್ಧ ವಸ್ತುವನ್ನು 'ಕಡ್ಡಾಯವಾಗಿ ಮುಟ್ಟುಗೋಲು' ಹಾಕಿದ್ದರು.

ನನಗೆ ಆಶ್ಚರ್ಯವಾಯಿತು; ನಾನು ಅಲ್ಲಿಯವರೆಗೆ ವಿಚಾರಣೆಗೊಳಗಾಗುತ್ತಿದ್ದು, ನನ್ನನ್ನು ನಿರಪರಾಧಿ ಎಂದು ಒಂದು ವರ್ಷದ ಅನಂತರ—ಈಗ ತೀರ್ಮಾನಿಸಿದ್ದಾರೆಂದು ನನಗೆ ತಿಳಿದೇ ಇರಲಿಲ್ಲ! ನನಗೆ ಗೊಂದಲವುಂಟುಮಾಡುವ ಸರಕಾರದ ಮಂದಗತಿಗೆ ಇದು ಮತ್ತೊಂದು ಉದಾಹರಣೆ ಅಷ್ಟೇ. ಸರಕಾರೀ ಫೈಲುಗಳು ತುಂಬಾ ಮಂದಗತಿಯಿಂದ ಸಾಗುತ್ತವೆಂದು ನನಗೆ ಗೊತ್ತು. ಆದರೆ ಪ್ಲೇಬಾಯ್ ನಂತಹ ದಪ್ಪ ಪತ್ರಿಕೆಯಿದ್ದಲ್ಲಿ ಅದು ಇನ್ನೂ ತುಂಬಾ ನಿಧಾನವಾಗಿ ನಡೆದೀತೆಂದು ನಾನಂದುಕೊಂಡೆ.

ಸ್ಫುರದ್ರೂಪಿ ತರುಣ ಇಂಜಿನಿಯರ್ ಸುರೇಶ ಹೊಸದಾಗಿ ಕೆಲಸಕ್ಕೆ ಸೇರಿದ್ದ. ಒಂದೆರಡು ವಾರಗಳಲ್ಲೇ ಬಾಸ್‌ನ ಹತ್ರ ಹೋಗಿ ತನ್ನ ದೂರು ಹೇಳಿಕೊಂಡ.

''ನೋಡಿ ಸಾರ್, ಈ ಆಫೀಸಿನಲ್ಲಿರೋ ತರುಣೀರೆಲ್ಲಾ ನನ್ನ ಗೆಳೆತನಕ್ಕೆ ಬೆನ್ನು ಹತ್ತಿದಾರೆ. ಏನ್ಮಾಡಲೀ ?''

"ಯಾರನ್ನೂ ತಿರುಗಿ ನೋಡಬೇಡ. ಸ್ವರ್ಗದಲ್ಲಿ ನಿನಗೆ ಒಳ್ಳೇ ಪ್ರತಿಫಲ ದೊರೆಯುತ್ತೆ" ಬಾಸ್ ಹೇಳಿದ.

ಇನ್ನೊಂದು ತಿಂಗಳಾದ ಮೇಲೆ ಸುರೇಶ ಮತ್ತೆ ಬಾಸ್ ಬಳಿ ಬಂದ.

"ಸಾರ್, ಆ ಬೆಂಗಾಲಿ ಬ್ಯೂಟಿ ಭಾವನಾ ಇದಾಳಲ್ಲ ಅವಳು ನಿನ್ನೆ ಸಂಜೆ ನನ್ನ ರೂಮಿಗೆ ಬಂದು 'ನಿಮ್ಮ ಗೆಳತಿ ಆಗ್ತೀನಿ' ಅಂತ ಕೇಳಕೊಂಡ್ಲು. ನಾನು ಬಯ್ದು ಓಡಿಸ್ಬಿಟ್ಟೆ. ಸ್ವರ್ಗದಲ್ಲಿ ನನಗೆ ಯಾವ ಪ್ರತಿಫಲ ದೊರೀಬಹುದು ?"

''ಒಂದು ದೊಡ್ಡ ಹುಲ್ಲಿನ ಮೆದೆ ಕೊಡ್ತಾರೆ ನಿನಗೆ, ಶುದ್ಧ ಕತ್ತೆ !"

18

ವಾರಿಗೆಯ ಹುಡುಗಿ

—ಶಿವ್ರು

ಬಿರುಗಾಳಿ ಬೀಸುತಿರೆ, ಕುಡಿಮಿಂಚು ತಳಿಸುತಿರೆ
ತಿಮಿರ ಭಯ ಹೃದಯದೊಳು ಹರಿಯುತಿರಲು
ಪೊರೆಗೆ ಎಲ್ಲೆಡೆಯಲ್ಲಿ ಮೈಕೊರೆವ ಚಳಿಯಿಹುದು
ತುಂಬಿರಲು ಬಾನೆಲ್ಲ ಕಾರ್ಮುಗಿಲು ಸಿಡಿಲು

ದೂರದಿಂ ಬಂದಿರುವೆ ಬಲು ಬಳಲಿ ನೊಂದಿರುವೆ
ಕತ್ತಲಲಿ ಸೋತಿರುವೆ ನೀ ದಾರಿ ನಡೆದು
ಮುಳ್ಳು ಕಲ್ಲನು ತುಳಿದು ಹಳ್ಳ ಕೊಳ್ಳವ ಕಳೆದು
ತುಂಬಿ ಹರಿಯುವ ಹೊಳೆಯ ಹಾದು ಬಂದಿರುವೆ.

ಮುಗ್ಧತೆಯು ಮಾಸಿಲ್ಲ ಕಪಟತೆಯು ಸೋಂಕಿಲ್ಲ
ಸುಳಿದಿಲ್ಲ ಬಾಳಿನಲಿ ಸಿನಿಕತೆಯ ನೆರಳು
ಜೀವನದ ಬಯಲಿನಲಿ ನೆಲೆಯ ಬೆಲೆಯನ್ನರಿತೂ
ದಿಟ್ಟತನವನು ತೋರಿ ನೀ ಸಾಗುತಿರುವೆ

ದಶಕಗಳು ಹಲವಾರು ಸರಿದಿಹವು ಅಂದಿನಾ
ಬಾಲ್ಯದಾ ಒಡನಾಟದುಲ್ಲಾಸ ಕಳೆದು
ಏನೋದು ಸಂಭ್ರಮದ ಸಡಗರದ ಭೇಟಿಯಿದೂ
ಮುಗಿದುದಾಗಲಿ ಎಲ್ಲ ದಾರಿ ದಣಿವು

ಕಟ್ಟು ಕೊಂಕಿಲ್ಲದಾ ವಾತ್ಸಲ್ಯ ಮಮತೆಗಳ
ಹೊಳೆಯನ್ನೆ ಹರಿಸಿರುವೆ ಸರಳತೆಯ ಬೆಡಗಿ
ನೈಜತೆಯ ಹೊಡೆತದಿಂ ಮುಗ್ಧತೆಯ ರಕ್ಷಿಸುವ
ಗಾರುಡಿಯ ತಿಳಿಸೆನಗೆ ವಾರಿಗೆಯ ಹುಡುಗಿ



ಪ್ರಭಾತ ಪ್ರಸಂಗ

— ಆರತಿ



ಬೆಳಗಿನ ಜಾವದ ನಸುಬೆಳಕಿನಲಿ
ಆಕಳಿಸುತ ಹೊರ ಬಾಗಿಲ ತೆರೆದು-
ಧಭ ಧಭ ಧಭ ಧಭ ಹೆಜ್ಜೆಯ ಸಪ್ಪಳ-
ಮೆಟ್ಟಿಲ ಮೇಲಿನ ಪೇಪರನೆತ್ತಿ
ನೋಡುವ ಮುಂಚೆಯೆ ಕೇಳಿಸಿತು ೧

ಯಾರಿದು? ಏತಕೆ? ಎಲ್ಲಿಗೆ ಓಟ?
ಯುದ್ಧವೆ? ದಂಗೆಯೆ? ನೂತನ ಕ್ರೀಡೆಯೆ?
ಅಂಗಡಿ ಬಾಗಿಲ ತೆರೆಯುವ ತವಕವೆ?
ಹಿಂದಿನ ರಾತ್ರಿಯು ಜಗಳದ ಕಾರಣ
ಹೆಂಡತಿ ಅಟ್ಟಿಸಿ ಬರುತಿಹಳೋ? ೨

ಕರುಣೆಯು ಸೂಸುತ ನೋಡಿದೆ ದಿಟ್ಟಿಸಿ
ಏದುಸಿರಿಡುತಿಹ ಪ್ರಾಣಿಯನು
ಬೆವರಿಗೆ ಬೆನ್ನಿಗೆ ಅಂಟಿದ ಬನಿಯನ್
ಕಾಲಿಗೆ ಹರುಕಲು ಖಾಕಿಯ ಚಡ್ಡಿ
ಪಾದಕೆ ಮಿರುಗುವ ಷೂಜುಗಳು

"ನಾನಿಲ್ಲಿರುವೆನು ಗಾಬರಿ ಏಕೆ
ಕಾರಣವೇನದು ಹೆದರದೆ ಹೇಳು
ಕಳ್ಳರ ಕಾಟವೆ ? ಬಸ್ಸಿಗೆ ಓಟವೆ?
ಕೆರೆಕೋಡಿ ಯೊಡೆದಿಹುದೆ? ಇಲ್ಲದಿರೆ
ಶುನಕ ಬೆನ್ನಟ್ಟಿ ಬರುತಲಿಹುದೋ?"

ಉಸಿರನು ತಿದಿಯೊಲು ಎಳೆದೂ ಊದಿ
ಓಡುತ ಹೇಳಿದ ಬನಿಯನ್‌ಧಾರಿ
"ಹೊಟ್ಟೆಯ ಬೊಜ್ಜನು ಕರಗಿಸುವಾಸೆಗೆ
ಹತ್ತನೆ ಸುತ್ತನು ಓಡುತಲಿರುವೆ
ಕೇವಲ ಇಪ್ಪತ್ತುಳಿದಿಹವು"

ದಿನವಹಿ ಓಡುವ ಕಾರಣದಿಂದ
ವದನದಿ ಮುದಿತನ ಹೊರಸೂಸಿಹುದು
ವಯಸ್ಸದು ಐವತ್ತಿರಬಹುದೆಂದು
ಊಹಿಸಿ ಕೇಳಿದೆ "ಎಷ್ಟರಿ ಪ್ರಾಯ?"
ಅವನಂದ "ಮುವತ್ತು ಮೂರಾಯು!"



ಆಸನಾಸೀನ

—ರಾ. ಶಿ.

ಮಧ್ಯಾಹ್ನ ಸುಮಾರು ಮೂರುಗಂಟೆ. ಕಛೇರಿಯಲ್ಲಿ ಕುಳಿತು ಬರೆದೂ ಬರೆದೂ ಸೊಂಟ ಹಿಡಿದುಕೊಂಡುಬಿಡ್ತು. ರೆಕಾರ್ಡು ರೂಮಿಗೆ ಹೋಗಿ ಒಂದು ಐದು ನಿಮಿಷ ನೆಲದಮೇಲೆ ಮಲಗಿದರೆ ನೋವು ಕಡಿಮೆಯಾಗಬಹುದೆಂದು ಅಲ್ಲಿಗೆ ಹೋಗಿ ಯಾರಿಗೂ ಕಾಣದ ಒಂದು ಮೂಲೆಯಲ್ಲಿ ಎರಡು ದಫ್ತರವನ್ನೇ ತಲೆದಿಂಬು ಮಾಡಿಕೊಂಡು ಮಲಗಿದೆ. ಹಾಗೆಯೇ ನಿದ್ರೆ ಹತ್ತಿದ್ದಿರಬೇಕು. ಯಾರೋ ಬಂದು ಎಬ್ಬಿಸಿದಂತಾಯಿತು. ಎಚ್ಚತ್ತೆ. ಕುಳಿತೆ. ಎದುರಿಗೇ ನಮ್ಮ ಚಿಕ್ಕ ಸಾಹೇಬರು. ಏನ್ರೀ ಇದು ಮಲಗುವ ಮನೆಯೋ ಎಂದರು. ಸರ್ವನಾಶೇ ಸಮುತ್ಪನ್ನೇ ಸತ್ಯಂ ವದತಿ ಕಿಂಕರಃ". ನನ್ನ ಟೊಂಕನೋವು, ಅದಕ್ಕೆ ತಕ್ಕಮದ್ದು ಎಲ್ಲವನ್ನೂ ಹೇಳಿದೆ. ಚಿಕ್ಕಸಾಹೇಬರೂ ನಾಲ್ವತ್ತಕ್ಕೆ ಮೀರಿದ ಯೌವನಸ್ಥರು. ಆಯುಕಟ್ಟು ಸ್ವಲ್ಪ ನನ್ನಂತೆಯೇ ಹೊಟ್ಟೆಯ ಸುತ್ತ ಹೆಚ್ಚಳತೆ. ಮೂರು ಸಾರಿ ಕೆಮ್ಮಿದರೆ ದಮ್ಮು ಬರುವ ಜಾತಿಯವರು. ನನ್ನ ಕಷ್ಟವನ್ನು ಕೇಳಿ ಬಹಳವಾಗಿ ಪಶ್ಚಾತ್ತಾಪಪಟ್ಟರು. ಹಾಗೂ ಜೋರಾಗಿ ನಡೆದರೆ ಉಬ್ಬಸ ಬರುತ್ತದೆಯೇ ಎಂದರು. ಬಿಸಿಲಿನಲ್ಲಿ ಬೆವರು ತ್ತದೆಯೇ ಎಂದರು. ನಾನು ಸ್ವಾಭಾವಿಕವಾಗಿ ಮುಚ್ಚುಮರೆ ಇಲ್ಲದೆ ಹೊಟ್ಟೆ ತುಂಬಾ ಉಣ್ಣುವವನು. ತೇಗು ಬಂದರೇ ತೃಪ್ತಿ-ತೇಗೆ ಹೊಟ್ಟೆ ತುಂಬಿದುದಕ್ಕೆ ಸೂಚನೆ ಎಂದು ತಿಳಿದವನು. ಬಿಸಿಲಿನಲ್ಲಿ ಬೆವರುವುದೂ ಉಂಟು. ಬಸ್ಸಿಗೆ ಜೋರಾಗಿ ನಡೆದರೆ ದಮ್ಮು ಬರುವುದೂ ಉಂಟು. ಚಿಕ್ಕ ಸಾಹೇಬರು ಕೇಳಿದಾಗ ಎಲ್ಲದಕ್ಕೂ ಹೂ ಎಂದೆ. ಹಾಗೆ ಹೇಳುವಾಗಲೇ ಏನೋ ಖಾಯಿಲೆಯ ಸೂಚನೆ ಗಳಿವು ಎಂದು ತೋರಿಬಂತು.

ಸಾಹೇಬರು ಸಂತುಷ್ಟಿಯಿಂದ ನಕ್ಕರು. ನಗುತ್ತಾ ಹೇಳಿದರು. ನನಗೂ ಹೀಗೆಯೇ ಆಗಿತ್ತು ಎರಡು ವರ್ಷದ ಕೆಳಗೆ. ಕೊಬ್ಬು ಜಾಸ್ತಿಯಾಗಿ ಎಲ್ಲಿ ಬೇಡವೋ ಅಲ್ಲೆಲ್ಲಾ ತುಂಬಿಕೊಳ್ಳುತ್ತದೆ. ಹಾಗೂ ಹೃದಯದ ಸುತ್ತಲೂ ತುಂಬಿಕೊಳ್ಳುತ್ತದೆ. ಒಂದಲ್ಲಾ ಒಂದು ದಿನ ಲಬ್ ಡಬ್ ಎನುವುದು ಲಸ್ ಡಸ್ ಎನ್ನುತ್ತದೆ. ಅಲ್ಲಿಗೆ ಮುಗಿಯಿತು. ಈಗಲೇ ಹುಷಾರಾಗಿರಿ. ಈ ಟೊಂಕನೋವು ಮೊದಲ ಸೂಚನೆ.

ಆಸನಗಳನ್ನು ಹಾಕುವುದನ್ನು ಕಲಿಯಿರಿ. ಈ ಹೆಚ್ಚು ಕೊಬ್ಬೆಲ್ಲಾ ಕರಗಿ ನೀರಾಗಿ ಜಿಂಕೆಯಂತೆ ದೇಹ ಚಿಮ್ಮುತ್ತದೆ. ಹೃದಯ ಪರಿವರ್ತನೆಯಾಗುತ್ತದೆ ಎಂದರು. ಆಸನಗಳನ್ನು ಹಾಕುವ ಒಂದು ಪುಸ್ತಕವನ್ನೂ ಸೂಚಿಸಿದರು. ಇವರು ಹೇಳಿದ ಕೂಡಲೆ ಹೃದಯವು ಪರಿವರ್ತನೆಯಾಯಿತು. ಲಪ್ ಡಬ್ ಎಂದು ಹೊಡೆದು ಕೊಳ್ಳುವ ಹೃದಯ ಒಮ್ಮೊಮ್ಮೆ ಲಬೋಲಬೋ ಎಂದಂತಾಯಿತು. ಒಮ್ಮೆ ಒಂದು ಗಳಿಗೆ ನಿಂತೇಹೋಯಿತು. ನನ್ನಾಟ ಆಯಿತು ವಿಮಾ ಕಂಪನಿ ಮುಳುಗಿತು ಎನ್ನುವ ಭಾವನೆ ಬಂತು ನನಗೆ. ಈ ವೈದ್ಯರ ಹತ್ತಿರ ಹೋಗಿ ಅವರ ಹೊಟ್ಟೆ ತುಂಬುವುದರ ಬದಲು ಈ ಪುಸ್ತಕ ತೆಗೆದುಕೊಂಡು, ಆ ಪ್ರಕಾಶಕನಿಗಾದರೂ ಒಂದು ತುತ್ತು ಅನ್ನ ಕೊಡೋಣ ಎಂದು ಆಸನ ವಿಧಾನದ ಪುಸ್ತಕವನ್ನು ಕೊಂಡು ತಂದೆ.

ಬೆಳಿಗ್ಗೆ ಏಳುತ್ತಲೂ ಆಸನಗಳನ್ನು ಪುಸ್ತಕ ನೋಡಿಕೊಂಡು ಹಾಕಲು ಆರಂಭಮಾಡಿದೆ. ಪದ್ಮಾಸನ, ಕುಕ್ಕುಟಾಸನ, ಮತ್ಸ್ಯಾಸನ, ಸಿಂಹಾಸನ, ಗಜಾಸನ ಎಲ್ಲವನ್ನೂ ಹಾಕದೆ ಸುಲಭವಾಗಿಯೇ ಕಂಡಿತು, ಇದರಿಂದ ಕೊಬ್ಬು ಕರಗಿ ಸೊಂಟ ಸಡಿಲವಾಗುವುದಾದರೆ ಒಳ್ಳೆಯದೇ ಆಯಿತು ಎಂದು ಮುಂದಿನ ಪಾಠಗಳನ್ನೂ ಅಭ್ಯಸಿಸ ಹೊರಟೆ.

ಒಂದು ಆಸನದ ರೀತಿಯನ್ನು ಚೆನ್ನಾಗಿ ವಿವರಿಸಿದ್ದ. ಅದನ್ನು ಹಾಕಲು ಯತ್ನಿಸಿದೆ. ಪದ್ಮಾಸನದಲ್ಲಿ ಕುಳಿತುಕೊಂಡೆ. ಬಲಗಾಲುಂಗುಷ್ಟವನ್ನು ಬಲಗೈಯಲ್ಲಿ ಹಿಡಿದು, ಕಾಲನ್ನೆತ್ತಿ ಕತ್ತಿನ ಹಿಂದೆ ಹಾಕು ಎಂದಿತ್ತು. ಒಂದು ಬೊಂಬೆಯೂ ಇತ್ತು. ಹಾಗೆಯೇ ಮಾಡಿದೆ. ಮೊದಮೊದಲು ಕಾಲು ಕತ್ತಿನ ಹಿಂದೆ ಹೋಗಲೊಲ್ಲದು. ನಾನು ಬಿಡಲೊಲ್ಲೆ. ಕಡೆಗೂ ಪ್ರಯಾಸಪಟ್ಟು ಕತ್ತಿನ ಹಿಂದಕ್ಕೆ ದೂಡಿದೆ ಹೀಗೆ ಮಾಡುವಾಗ ಎರಡೂ ಕೈಗಳು ಕಾಲಿನ ಕೆಳಗೆ ಕತ್ತಿನ ಮೇಲೆ ಸಿಕ್ಕಿಹಾಕಿಕೊಂಡವು.

ಪುಸ್ತಕವನ್ನು ನೋಡುತ್ತೇನೆ. ಎರಡು ಕೈಗಳನ್ನೂ ನೆಲದಮೇಲಿಟ್ಟು ದೇಹದ ಭಾರವನ್ನು ಕೈಗಳ ಮೇಲೆ ಬಿಡು ಎಂದಿತ್ತು.

ಎರಡೂ ಕೈಗಳನ್ನು ಬಿಡಿಸಿಕೊಳ್ಳಲೇ ಆಗದು. ಒಂದು ನಿಮಿಷ, ಎರಡು ನಿಮಿಷ ಆಯಿತು. ಕಾಲುಗಳು ನೋವಲಾರಂಭಿಸಿತು. ಕತ್ತು ಮುರಿಯುವಂತೆ ಆಯಿತು. ಕಡೆಗೆ ನೋವು ಹೆಚ್ಚಾಯಿತು. ಬಾಯಿ ಬಡಿದುಕೊಳ್ಳುವಷ್ಟು ನೋವಾಯಿತು. ಆದರೆ ಬಾಯಿ ಬಡಿದುಕೊಳ್ಳುವುದಕ್ಕೂ ಕೈಗಳು ಬೇಕಲ್ಲ. ಅವೇ ಇಲ್ಲ. ತಡೆಯಲಾರದೆ ಲಬೋ ಲಬೋ ಎಂದೆ. ಒಳಗಿನಿಂದ ಹೆಂಡತಿಯು ಬಂದಳು. ಬಂದವಳೇ ನಗಲಾರಂಭಿಸಿದಳು. ಇದೇನು ಈ ವಯಸ್ಸಿನಲ್ಲಿ ಈ ಹುಡುಗಾಟ ಎಂದಳು. ಕಾಲು ಸಿಕ್ಕಿಹಾಕಿಕೊಂಡಿದೆ ಬಿಡಿಸು ಎಂದೆ ಅವಳೂ ಕೈಹಾಕಿ

ಕಾಲು ಬಿಡಿಸಲೆತ್ನಿಸಿದಳು. ಆಗಲಿಲ್ಲ. ಜೋರಾಗಿ ಎಳೆದಳು ಕೈ ಜಾರಿತು ದೊಪ್ಪನೆ ಮೂಲೆಯಲ್ಲಿ ಬಿದ್ದಳು, ನಿಮ್ಮ ಟೊಂಕನೋವು ಹಾಗಿರಲಿ ನನಗೆ ಬಂತು ಈಗ ಎಂದು ರೇಗುತ್ತಾ ಎದ್ದಳು, ಮರಳಿ ಯತ್ನವ ಮಾಡಿದಳು, ಆದರೆ ಪ್ರಯೋಜನ ವಿಲ್ಲ, ನನಗೋ ಹೀಗಯೇ ಸತ್ತು ಹೋದರೆ ಹೆಣ ಹೊರುಕ್ಕೆ ಬಂದವರೂ ನನ್ನ ನೋಡಿ ನಗುತ್ತಾರಲ್ಲಾ ಎಂದು ಭಯ, ಏನಾದರೂ ಮಾಡೆ ಎಂದು ಕೂಗಿದೆ. ಚಿಕ್ಕ ಸಾಹೇಬರಿಗೆ ಹೇಳಿ ಕಳುಹಿಸಿ, ಅವರಿಗೆ ಇದೆಲ್ಲಾ ಬರುತ್ತೆ ಎಂದೆ, ಬೇಗ ಬೇಗ ಮಗನನ್ನು ಚಿಕ್ಕ ಸಾಹೇಬರ ಮನೆಗೆ ಕಳಿಸಿದಳು. ಅವರೂ ಬೇಗ ಬೇಗ ಬಂದರು. ನಗುತ್ತಾ ನಿಂದರು, ಕಾಲು ಕೆಳಗೆ ಕೈ ಹಾಕಬಾರದು ಎಂದರು. ಇದಕ್ಕೆ ಪ್ರಾಯಶ್ಚಿತ್ತವೇ ಇಲ್ಲ ಎಂದರು ಹಿಮಾಲಯದಲ್ಲಿ ಒಬ್ಬ ಗೋಸಾಯಿ ಹೀಗೆಯೇ ಮಾಡಿ ಲಯವಾದನು ಎಂದು ಧೈರ್ಯ ಕೊಟ್ಟರು, ನನಗೂ ಲಯವಾಗುವ ಕಾಲ ಬಂದಂತೆಯೇ ಕಂಡಿತು. ಕಡೆಗೆ ವೈದ್ಯರನ್ನು ಕರೆಸೋಣ ಅವರೇನಾದರೂ ಮಾಡಿ ಯಾರು ಎಂದರು. ವೈದ್ಯರೂ ಬಂದರು. ಅವರೂ ನೋಡಿದರು. ಇದು ಪೈಲ್ವಾನರ ಕೆಲಸ ನನ್ನದಲ್ಲ. ಸಾಯುವ ಹಾಗಾದರೆ ಹೇಳಿ ಕಳುಹಿಸಿ. ಆಗ ಬಂದು ಇಂಜಕ್ಷನ್ ಕೊಡುತ್ತೇನೆ ಎಂದರು. ಇನ್‌ಜಕ್ಷನಿಲ್ಲದೇ ಸಾಯುತ್ತೇನೆ ಏನು ಬೇಡ ಹೋಗರಿ ಎಂದು ಅವರ ಮೇಲೆ ರೇಗಿ ಕಳಿಸಿದೆ. ಆ ವೇಳೆಗೆ ಪೈಲ್ವಾನನಿಗೆ ನಮ್ಮಾಕೆ ಹೇಳಿಕಳಿಸಿದ್ದರು. ಆತನೂ ಜಗ್ಗಿ ಹಾಕುತ್ತ ಬಂದ. ಒಂದು ಕಾಲು ಹಿಡಿದು ಜಗ್ಗಿದ ಅವನಿಗೆ ಕಾಲು ಜಗ್ಗಲಿಲ್ಲ. ಅಯ್ಯೋ ದೇವ ಎಂದಂದು ಇನ್ನೊಮ್ಮೆ ಜಗ್ಗಿದ ಲಟಲಟ ಶಬ್ದವಾಯಿತು. ಹೋಯಿತು ನನ್ನ ಕಾಲು ಎಂದಂದುಕೊಂಡೆ. ಆದರೆ ಅವನು ಅಯ್ಯಯ್ಯೋ ಎಂದು ಹೊಡೆದುಕೊಳ್ಳಲಾರಂಭಿಸಿದ ಅವನ ತೋಳು ಲಟಲಟವಾಗಿತ್ತು. ಇದು ನನ್ನಿಂದಾಗದು ನಮ್ಮ ಗುರುಗಳಿಗೆ ಕರೆಕಳುಹಿಸಿ ಎಂದ. ಗುರುಗಳು ಬಂದರು. ಗುರುಗಳು ಆ ಪ್ರಾಂತ್ಯಕ್ಕೇ ಪ್ರಸಿದ್ಧ, ಉಸ್ತಾದ್ ಹಮಾಖಾ ಎಂದರೆ ಜಟ್ಟಿಗಳೆಲ್ಲರೂ ಮುಗ್ಗರಿಸುತ್ತಿದ್ದರು. ಆತ ಬಂದ ಮಣ್ಣು ಕೈಗೆ ಬಳಿದುಕೊಂಡ, ನನ್ನ ಕಾಲು ಹಿಡಿದು ಸೀಬೇಕಾಯಿ ಮರದಿಂದ ಕೀಳುವ ಹಾಗೆ ಕತ್ತಿನ ಹಿಂದಿನಿಂದ ಕಿತ್ತ, ಒಂದು ಕಾಲು ನೆಲದ ಮೇಲೆ ಬಿತ್ತು. ಕೈ ಸಡಿಲವಾಯಿತು. ಇನ್ನೊಂದು ಕಾಲನ್ನೂ ಕಿತ್ತ, ಅದೂ ಬಿತ್ತು ನೆಲದ ಮೇಲೆ.

ನನಗೆ ಕಾಲು ಇದ್ದಂತೆಯೇ ತೋರಲಿಲ್ಲ ಕತ್ತು ಮಾತ್ರ ನೋಯುತ್ತಲೇ ಇತ್ತು. ಕತ್ತಿಗೆ ಮೂರು ದಿನ ತೈಲ ಹಾಕಿ ತಿಕ್ಕಿದರೆ ಸರಿ ಹೋಗುತ್ತೆ ಎಂದ. ಹಾಗೆಯೇ ಮೂರು ದಿನ ತಿಕ್ಕಿದ. ಈಗ ಕತ್ತು ಸರಿಹೋಯ್ತು.

ಕಾಲೂ ಕಾಲಾಗಿದೆ. ಆದರೆ, ಆ ಸೊಂಟನೋವು ಮಾತ್ರ ಹೋಗಲಿಲ್ಲ. ಮಧ್ಯಾಹ್ನ ಮೂರು ಗಂಟೆ ಆದರೆ ರೆಕಾರ್ಡು ರೂಮೇ ಬಾ ಎನ್ನುತ್ತದೆ.

ಪಡುವಣ ಯಾತ್ರೆ-೨

— **ಡಾ|| ಆನಂದ್**

ವಾಷಿಂಗ್‌ಟನ್ ಏರ್‌ಪೋರ್ಟ್‌ನಿಂದ ನಾಗ್‌ಪಾಲ್ ಮನೇಗೆ ಹೊರಟೆವು, ಕಾರಿನಲ್ಲಿ. ನೂರಾರು ಕಾರುಗಳು ಸರ್ ಅಂತ ಓಡಾಡುತ್ತಿದ್ವು ಆದ್ರೆ ರಸ್ತೆಗಳೆಲ್ಲ ಬಿಕೋ ಅಂತಿದ್ವು! ಏನಪ್ಪ ಸುನಿಲ್, ಇವತ್ತು ಇಲ್ಲಿ ಬಂದ್ ಏನಾರೂ ಇದೆಯೋ? ಅಂದೆ. ಸುನಿಲ್ ನಕ್ಕ, ಇದೆ ಡಾಕ್ಟ್ರೆ, ಇಲ್ಲಿರೋದೇ ಹೀಗೆ ! ಇಲ್ಲಿ ಯಾರೂ ನಡೆಯಲ್ಲ, ಕಾರುಗಳಿವೆಯಲ್ಲ ಅಂದ. ಸುಮಾರು ಹತ್ತು ಕಿಲೋಮೀಟರ್ ಆದಮೇಲೆ, ಒಂದು ಸಣ್ಣ ಪಾಟ್ ಹೋಲ್ ಸಿಕ್ತು ಕಾರ್‌ಟೈರ್‌ಗೆ! ನನಗೋ ಅಸಾಧ್ಯ ಸಂತೋಷ! ಇಲ್ಲೂ ನಂ ಮನೇ ಹತ್ರ ಇರೋ ಹಾಗೆ ಒಂದು ಪಾಟ್ ಹೋಲ್ ಆದರೂ ಸಿಕ್ತಲ್ಲ, ಅಂತ! **'I feel at home !'** ಅಂದೆ. ಸುನಿಲ್ ಮನೆ ಸಿಕ್ತು. ನನಗೋ, ಜೆಟ್ ಲ್ಯಾಗ್ ಪ್ರಭಾವದಿಂದ ಭಾರೀ ನಿದ್ದೆ. ಮಲಗೋ. ಕೊಠಡಿಯ ಕಿಟಕಿಗಳೆಲ್ಲ ಬಂದ್. ಸ್ವಲ್ಪ ತೆಗೆಯೋಣ, ಗಾಳಿ ಬರಲಿ ಅಂದೆ. "ಇಲ್ಲ ಇಲ್ಲಿ ಬಹಳ ಚಳಿ, ಹೊರಗೆ ಎಷ್ಟಿದೆ ಗೊತ್ತೆ ಟೆಂಪರೇಚರ್ರು? ಅಂದ ಸುನಿಲ್. 'ಇಲ್ಲ!' ಅಂದೆ. ಸುಮಾರು ಆರು - ಎಂಟು ಡಿಗ್ರಿ ಸೆಲ್ಸಿಯಸ್ ಅಂದ. ಚಳಿ ಆಯ್ತು! ಹಾಗೇ ಮಲಗಿದೆ.

ಬೆಳಗ್ಗೆ ನಾನು ಏಳೋ ಹೊತ್ತಿಗೆ ಆರೂವರೆ. ಸುನಿಲ್ ಆಗಲೇ ಕೊರೆಯುವ ಚಳೀಲೇ ಜಾಗಿಂಗ್ ಮುಗಿಸಿ ಬಂದು ಕಾಫೀ ಕುಡೀತಾ ಕೂತಿದ್ದ. ಫಿಲ್ಟರ್ ಕಾಫೀ ಕುಡಿದು ಅಭ್ಯಾಸ. ಈ ಕಾಫೀ ಯಾಕೋ ಅಷ್ಟು ರುಚಿ ಇರಲಿಲ್ಲ. ಬೇಗ ಆಸ್ಪತ್ರೆಗೆ ಹೊರಡಲು ಸಿದ್ಧರಾದೆವು. ಸುನಿಲ್ ಭಾರೀ ಆಸ್ಪತ್ರೆಯೊಂದರಲ್ಲಿ ವೈರಸ್ ಬಗ್ಗೆ ರಿಸರ್ಚ್‌ನಲ್ಲಿದ್ದ. ನನ್ನ ಉದ್ದೇಶ ಅಲ್ಲಿಯ ಪದ್ಧತಿ, ಇತ್ಯಾದಿಗಳನ್ನ ನೋಡಿ, ಕರುಬಿ, ಬರೋದು. ಸರಿ ಹೊರಟೆವು. ಎಲ್ಲೆಲ್ಲೂ ಭವ್ಯವಾದ, ಭಾರೀ ಎತ್ತರದ ಭವನಗಳು. ರಸ್ತೆಗಳಲ್ಲಿ ಒಂದು ಚೂರು ಕಸ ಕಡ್ಡಿ ಇರಲಿಲ್ಲ! ಎಲ್ಲೋ ಅಲ್ಲಿ, ಇಲ್ಲಿ, ಒಬ್ಬರು ಜಾಗಿಂಗ್ ಮಾಡುತ್ತಿದ್ರು. ಕೆಲವರು ಜಾಗಿಂಗ್ ಮಾಡುತ್ತಿರುವಾಗಲೇ ವಾಕ್ ಮನ್ ಸಂಗೀತ.ಜೊತೆಗೆ ! ರಸ್ತೆ ನಿಯಮಗಳನ್ನ ಎಲ್ಲರೂ ಚಾಚೂ ತಪ್ಪದೆ ಪಾಲಿಸಿದರೆ ಏನಾಗುತ್ತೆ ಅಂತ ಮೊದಲ ಬಾರಿಗೆ ನನಗೆ ಅನುಭವ ಆಯ್ತು !

ಆಸ್ಪತ್ರೆ ಸೇರಿದೆವು. ಅಲ್ಲಿ ಪಾರ್ಕಿಂಗ್ ತಾಪತ್ರಯ ! ಇದು ಅಮೆರಿಕಾದಲ್ಲಿ ದೊಡ್ಡ ಸಮಸ್ಯೆ, ಎಲ್ಲರಿಗೂ. ದೂರದಲ್ಲಿ ಕಾರು ಪಾರ್ಕ್ ಮಾಡಿ ಹತ್ತು ನಿಮಿಷ ನಡೆದು ಆಸ್ಪತ್ರೆ ಒಳಹೊಕ್ಕೆವು. ಎಲ್ಲಾ ಬಹಳ ರೀತಿ, ನೀತಿ ಅಲ್ಲಿ. ಸುನಿಲ್ ನನ್ನ ತನ್ನ ಲ್ಯಾಬ್‌ಗೆ ಕರೆದೊಯ್ದು ಇತರರಿಗೆ ಪರಿಚಯಿಸಿದ. ಭಾರತೀಯರು ಬೇಕಾದಷ್ಟು ಜನ ಇದಾರೆ ಅಲ್ಲಿ ! ಎಲ್ಲರೂ ಮೂಗಿನ **accent** ನಲ್ಲಿ ಹಾಯ್ ಅಂದ್ರು. ಅಲರ್ಜಿ

ವಿಭಾಗದ ವೈದ್ಯರ ಬಳಿ ಹೋದೆವು. ಅವರು ತಮ್ಮ ವಿಭಾಗದಲ್ಲಿ ಆಗ್ತಿದ್ದ ಕಾರ್ಯ ಕ್ರಮಗಳನ್ನೆಲ್ಲ ವಿವರಿಸಿದರು. ಒಂದು ವಿಶೇಷ ಅಂದ್ರೆ ಎಲ್ಲರೂ ಚಟುವಟಿಕೆ ಯಿಂದ, ಕಾಲಹರಣ ಮಾಡದೆ ಕೆಲಸ ಮಾಡ್ತಿದ್ರು. ನಂ ಹಳೇ ಮೇಷ್ಟ್ರು ಸ್ಕೂಲಲ್ಲಿ ಹೇಳ್ತಿದ್ದುದು ಜ್ಞಾಪಕಕ್ಕೆ ಬಂತು — ಪಾದರಸದ ಹಾಗಿರ ಬೇಕು ಕಣ್ರೋ, ಪಾದರಸದ ಹಾಗೆ ! ಅಂತ. ನಂ ದೇಶದಲ್ಲೂ ಪಾದರಸದ ಹಾಗಿರೋರು ಜಾಸ್ತಿ. ಆದರೆ ಟೆಸ್ಟ್ ಟ್ಯೂಬ್‌ನಲ್ಲಿರೋ ಪಾದರಸದ ಹಾಗೆ. ಭಾರ ಮಾತ್ರ, ಜಡತನ ಮಾತ್ರ !

ಅಲ್ಲಿನ ಆಸ್ಪತ್ರೇಲಂತೂ ಕಂಪ್ಯೂಟರುಗಳ ಹಾವಳಿ ಬಹಳ ಆಗಿಬಿಟ್ಟಿದೆ. ಇನ್‌ಫರ್‌ಮೇಷನ್‌ನಿಂದ ಹಿಡಿದು ಡಿಸ್‌ಚಾರ್ಜ್ ಆಗೋ ತನಕ ರೋಗಿಗಳ ಮಾಹಿತಿ ಎಲ ಹಿಡಿದಿಟ್ಟಿರ್ತಾರೆ ! ಒಂದು ಚೂರೂ ತಪ್ಪಾಗುಲ್ಲ ! ಆಸ್ಪತ್ರೇಲಿ ಅಲರ್ಜಿಯಿಂದ ಸೀನುತ್ತಿರೋರ್‍ನ್ನ ನೋಡಿ, ಬೆಂಗಳೂರು ನೆಗಡಿ ಜ್ಞಾಪಕ ಬಂತು. ಅಲ್ಲಿ ಪಾರ್ಥೀನಿಯಂ ಇಲ್ಲ, ಆದರೆ ಅದರ ತಮ್ಮ **rag weed** ಅಂತ ಇದೆ, ನೆಗಡಿ ಉಂಟು ಮಾಡುಕ್ಕೆ! ಅಲರ್ಜಿ ವಿಚಾರ ಸಂಶೋಧನೆಗಳನ್ನ ಬಹಳ ಮಾಡ್ತಿದಾರೆ ! ಇವರೆಲ್ಲ ಸೇರಿ ಅಲರ್ಜೀನ ನಿರ್ಮೂಲ ಮಾಡೇ ಬಿಟ್ರೆ ನನ್ನಂತಹ ಬಡ ಡಾಕ್ಟ್ರರ ಗತಿ ಏನಪ್ಪ ಅಂತೆ ಸ್ವಲ್ಪ ಆತಂಕ ಆಯ್ತು ಅನ್ನಿ

ಸಂಜೆ ಶಾಪಿಂಗ್‌ಗೆ ಹೋದೆವು. ಅಮೆರಿಕದಲ್ಲಿ ಶಾಪಿಂಗ್ ಹೋಗೋದ್ರು ಶಾಪವೇ ಸರಿ ! ಇರೋದೆಲ್ಲ ತಗೋಬೇಕು ಅನ್ನಿಸುತ್ತೆ, ಡಾಲರು ನಾಸ್ತಿ? ಭಾರತೀಯ ಅಂಗಡಿಗೆ ಹೋದೆವು. ಅಲ್ಲಿ ಎಲ್ಲ ತರಹ ಉಪ್ಪಿನ ಕಾಯಿ, ಹಪ್ಪಳ ಸಿಗುತ್ತೆ. ಯಾವ ತಿಂಡಿ ಕೊರತೇನೂ ಇಲ್ಲ. ನಾವು ಹೋದದ್ದು ಬುಧವಾರ. ಮಹಾಭಾರತ್ ಕ್ಯಾಸೆಟ್ ಇತ್ತು ಅಲ್ಲಿ ! ಯಾವುದೋ ಹಳೇದಿರಬೇಕು ಅಂತ ಅಂಗಡಿಯವನ್ನ ಕೇಳಿದೆ. ಹೋದ ಭಾನುವಾರ (ಮೂರು ದಿನದ ಹಿಂದೆ) ಪ್ರಸಾರವಾದ್ದು ಭಾರತದಲ್ಲಿ ಅಂದ ! ಎಲ ಎಲಾ ಅಂದುಕೊಂಡೆ. ರಾತ್ರಿ ಸುನಿಲ್‌ದೇ ಅಡಿಗೆ, ಮನೇಲಿ ಸೊಗಸಾಗಿ ಅಡಿಗೆಮಾಡೋದು ಕಲಿತಿದ್ದ. ಅನ್ನ, ಹುಳಿ, ಮಾವಿನಕಾಯಿ ಉಪ್ಪಿನ ಕಾಯಿ, ಗಟ್ಟಿ ಮೊಸರು, ಇನ್ನೇನು ಬೇಕು ಭಾರತೀಯ ನಾಲಿಗೆಗೆ? ಗಡದ್ದಾಗಿ ತಿಂದೆ. ಟಿವೀಲಿ ಯಾವುದೋ ಚಲನ ಚಿತ್ರ ಬರ್‍ತಿತ್ತು. ನೋಡ್ತಾನೇ ನಿದ್ದೆಬಂದ್ಬಿಡ್ತು, ಭಾರತದ ಟಿ. ವಿ. ತರಹಾನೇ !

ಅಂತರಜಾತಿ ವಿವಾಹ

—ನ. ರತ್ನ

ನಂಗೆಂತೂ ನಂಬೋಕ್ಕೆ ಆಗ್ತಿಲ್ಲ. ಲತಾನೇ ಹೇಳಿದ್ದು. ಹಾಗೆ ಲತಾ ಅಲ್ಲಿ ಇಲ್ಲಿ ಮಾತು ಕದ್ದು ಕೇಳೋಳಲ್ಲವಾದ್ರೂ, ತಾವೇ ಕಿವಿಗೆ ಬಿದ್ದ ಮಾತು ಮನಸ್ಸಿನಲ್ಲೇ ಟೇಪ್ ಮಾಡಿದಷ್ಟು ಚೆನ್ನಾಗಿ ಒಪ್ಪಿಸ್ತಾಳೆ.

ಸಿನ್ಹ ಅವರ ಮನೆಯಲ್ಲಿನ ಸಂಭಾಷಣೆ ಅಂದಳು. ಶುದ್ಧ ಮಡಿ ಮನೆಯಲ್ಲಿ ಹುಟ್ಟಿ, ಬೆಳೆದ ಶ್ರೀ ಲಕ್ಷ್ಮೀನರಸಿಂಹಾಚಾರ್ಯರು ಸಿನ್‌ಹಾ ಆದರು ಅಂದಾಗಲೇ ನಿಮಗೆ ಅವರ ಪರಿಚಯ ಆಗಿರ ಬೇಕು. ಹೊರ ದೇಶಗಳ ಬಗ್ಗೆ ತಿಳಿದು ತುಂಬಾ ಲಿಬರೇಟೆಡ್ ಆದವರು. ತಾವು ಸ್ವತಃ 'ಏಕಪತ್ನೀವ್ರತರಾದರೂ ತಮ್ಮ ನಡವಳಿಕೆ ಯನ್ನು ಬೇರೆಯವರ ಮೇಲೆ ಹೇರಿ ದವರಲ್ಲ.

ದ್ರೌಪದಿ ಯಾವುದೇ ಹೆಣ್ಣಿ ತನ್ನ ಗಂಡನಲ್ಲಿ ವೈವಿಧ್ಯವನ್ನು ಆಶಿಸುವುದರ ಸಂಕೇತ ಅಂದವರು; ಬೇಕಾದ್ದೆಲ್ಲಾ ಒಂದೇ ಅಂಗಡೀಲಿ ಸಿಗದಿದ್ದರೆ ಮಾರ್ಕೆಟ್ಟಿಗೆ ಹೋದರೆ ತಪ್ಪೇನು ಎಂದು ಅವರ ತರ್ಕ; ಗುಜರಾತಿನಲ್ಲಿ ಮದುವೆ ಕಾಂಟ್ರಾಕ್ಟ್ ಮಾಡಿಕೋತಾರಂತೆ ಅಂದರೆ ಲಾಯರ್ ನ್ಯಾಯವಾಗಿರಬೇಕು, ಅಷ್ಟೇ ಅಂದವರು; ಅಮೇರಿಕದಲ್ಲಿ ಹಾಸ್ಟೆಲ್ಲಿನಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೂಡಿಕೊಳ್ಳೋಕೆ ಪ್ರತ್ಯೇಕ ಕೊಠಡಿಗಳಿರುತ್ತವೆ ಅಂದಾಗ ಮೈದಾನದಲ್ಲಿ ಚಳಿ ಆಗೋಲ್ಲವೇ ಪಾಪ ಅಂತ ಕನಿಕರಿಸಿದವರು, ಸಲಿಂಗ ವಿವಾಹ ಅಂತ ಮೂಗು ಮುರಿದವರಿಗೆ ಮದುವೆಯಲ್ಲಿ ಪ್ರೀತಿ ಮುಖ್ಯ ಎಂದು ಮೂಗು ಸೆಟೆಸಿದವರು, ಹೌದು ತುಂಬಾ ಲಿಬರೇಟೆಡ್, ಅದಕ್ಕೆ ನಮ್ಮ ಮೂಲೆ ಅಂಗಡೀಲಿ ಅವರ ಹಿಂದೆ, ಅವರ ಹೆಸರನ್ನು ಸಿನ್‌ಹಾ....ಹಾ ಎಂದು ಅಪಹಾಸ್ಯ ಮಾಡಿದಾಗ, ಅವರ ಮನಸ್ಸಿನ ಔದಾರ್ಯ ನೆನೆದು ನನಗೆ ಸಿಟ್ಟು ಬರುತ್ತದೆ.

ಆದ್ದರಿಂದಲೇ, ಲತಾ ತಾನೇ ಕೇಳಿದ್ದು ಇದು ಅಂದರೂ ನಂಬೋಕ್ಕೆ ಕಷ್ಟ.

*　　*　　*　　*

ಡ್ಯಾಡೀ,....

ಇಲ್ಲ ಅಂದ್ರೆ ಇಲ್ಲ

ಡ್ಯಾಡೀ, ಪ್ಲೀಸ್. ಹೇಳಿ, ನಿಮಗೆ ಫಿಲಿಪ್ ಇಷ್ಟ ಅಲ್ಲವೇ ? ನೀವೇ ಹೇಳಿದ್ದರಲ್ಲಾ ನಿಮಗೆ ಅವನ್ನ ಕಂಡ್ರೆ....

ಏನಿಲ್ಲಾ ಅಂದನೇನು ಈಗ ?
ಮತ್ತೇನು? ಮದುವೆಗೆ ಒಪ್ಪೋಲ್ಲ ಅಂತೀರಲ್ಲಾ.
ಅದಕ್ಕೂ ಇದಕ್ಕೂ ಏನು ಸಂಬಂಧ ?
ನೀವು ಒಪ್ಪಿದ್ರೆ ನನಗೆ ತುಂಬಾ ಖುಷಿ.
ಒಪ್ಪೋಲ್ಲ.
ಯಾಕೆ? ಅಪ್ಪಾ, ನಮ್ಮಯ್ಯ....
ಕನ್ನಡದಲ್ಲಿ ಮಾತಾಡಿ ಇನ್‌ಫ್ಲುಯೆನ್ಸ್ ಮಾಡಬೇಡ ?
ಫಿಲಿಪ್‌ಗೆ ನನ್ನ ಕಂಡ್ರೆ ತುಂಬಾ ಇಷ್ಟ. ನನಗೂ ಅವನೂಂದ್ರೆ ಪ್ರೀತಿ....
ಒಪ್ಪೋಲ್ಲ.
ಅಪ್ಪಾ, ಮದುವೆಗೆ ಪ್ರೀತೀನೇ ಮುಖ್ಯ ಅಂತ....
ಹೌದು, ಪ್ರೀತಿ ಮುಖ್ಯ. ಆದರೆ ಸ್ವಜಾತೀಲಿ.
ನೀವೇ ಹೀಗಂದರೆ ಹೇಗೆ? ಇದಕ್ಕೆ ಮುಂಚೆ ಯಾವತ್ತೂ....
ನೋಡು ಮಗಳೇ, ಈ ಮಾತು ಬಿಡು. ಅವನ ರೀತೀನೇ ಬೇರೆ.
ಅಪ್ಪಾ, ಅವನ ರೀತಿ ಎಲ್ಲಾ ನನಗೆ ಚೆನ್ನಾಗಿ ಗೊತ್ತು.
ನನಗೇನು ಬೇಕು ಅಂತ ಅವನಿಗೆ ಚೆನ್ನಾಗಿ ಗೊತ್ತು.
ನಾವಿಬ್ಬರೂ ಒಬ್ಬರನ್ನೊಬ್ಬರು ಪೂರ್ತಿ ಅರ್ಥಮಾಡಿಕೋತೇವೆ.
ನಾವಿಷ್ಟು ವರ್ಷ ಜೊತೇಲಿದ್ರೂ ಒಂದಿನ ಜಗಳ ಆಡಿಲ್ಲ.
ನಮ್ಮ ಸ್ನೇಹ, ಪ್ರೀತಿ, ಎಲ್ಲರಿಗೂ.......
ಆದರೂ ಅವನ ಜಾತಿ ಬೇರೆ.
ಅಲ್ಲಪ್ಪಾ, ಸ್ನೇಹಕ್ಕೆ ಅಡ್ಡಿ ಬರದ ಜಾತಿ, ಪ್ರೀತಿಗೆ ಅಡ್ಡಿ ಬರದ ಜಾತಿ, ಮದುವೆಗೆ ಮಾತ್ರ ಯಾಕೆ ?....

ಅದೆಲ್ಲಾ ಯಾಕೆ ಮಗಳೆ ? ನೋಡು, ನೀನು ಫಿಲಿಪ್ ಇಷ್ಟ ಅಂದೆ, ಒಪ್ಪಿದೆ. ಅವನ್ನ ಮನೆಗೆ ಕರೆದುಕೊಂಡು ಬರ್‍ತೀನಿ ಅಂದೆ, ಅವನ ಜೊತೆ ಎಲ್ಲೆಲ್ಲೂ ಓಡಾಡಿದೆ; ಒಪ್ಪಿದೆ. ಅವನ ಜೊತೆ ಊಟ ಮಾಡ್ತೀನಿ ಅಂದೆ. ಅವನ್ನ ನಿನ್ನ ರೂಮಲ್ಲೆ ನಿನ್ನ ಜೊತೆ ಮಲಗಿಸಿಕೊಂಡಾಗಲೂ ಸುಮ್ಮನಾದೆ. ನಿಮ್ಮಿಬ್ಬರ ಪ್ರೀತಿ ಮೆಚ್ಚಿದೆ ಆದರೆ....

ಆದರೆ ಏನಪ್ಪಾ? ಅದೆಲ್ಲಾ ಆಗಬಹುದಂತೆ, ಮದುವೆ ಮಾತ್ರ.
ಒಪ್ಪೋಲ್ಲ. ನೋಡು. ನೀನೆಷ್ಟೇ ಹೇಳಿದ್ರೂ ನಾನು ಈ ಅಂತರಜಾತಿ ವಿವಾಹ ಒಪ್ಪೋಲ್ಲ.

ಎಂಥೆಂಥಾ ಮದುವೆ ಒಪ್ಪಿದವರು ಈಗ....

ಅಪ್ಪ, ಫಿಲಿಪ್ ನನ್ನ ಮದುವೆಗೆ ನೀವು ಒಪ್ಪದೇ ಇದ್ದರೆ ನಾನು ಅವನ ಜೊತೆ ಓಡಿ ಹೋಗಿ ಪ್ರಾಣ ಬಿಡ್ತೀನಿ.

ನೋಡು, ಫಿಲಿಪ್‌ನನ್ನು ಮರೆತು ಬಿಡು. ಬೇರೆ ಯಾರನ್ನಾದರೂ ಆರಿಸಿಕೋ. ಹಿಂದೂ, ಮುಸ್ಲಿಂ, ಕ್ರಿಸ್ಚಿಯನ್, ಅಮೆರಿಕನ್ ಮಲೇಶಿಯನ್, ಆಫ್ರಿಕನ್, ಯಾರಾದರೂ ಸರಿ. ಈ ಅಂತರಜಾತಿ ವಿವಾಹ ಮಾತ್ರ ಬಿಡು. ಫಿಲಿಪ್ ತುಂಬಾ ಪ್ರೀತಿಪಾತ್ರ ಎಲ್ಲಾ ಸರಿ. ಆದರೂ ನೀನು ನಾಯಿಯನ್ನು ಮದುವೆ ಆಗೋದು ನಾನು ಒಪ್ಪೋಲ್ಲ. ಮನುಷ್ಯ ಜಾತೀಲಿ ಯಾರನ್ನು ಬೇಕಾದರೂ....
ಲತನಿಗೆ ಮುಂದೆ ಕೇಳೋಕ್ಕಾಗಲಿಲ್ಲವಂತೆ.

ಏಕೆ ?

ಕವಿಕುಲಲಾಮ

'ಸಂವಿಧಾನಕೆ ಬದ್ಧರೇ
ನೀವು?' 'ಹೌದು
ನಮಗೆ ಬೇಕಾದಂತೆ ಆದ
ತಿದ್ದ ಭೌದು.'



‘‘ರೋಜ್‌ಗಾರ್ ಅಂತೇನೋ ಏಳ್ತವ್ರಲ್ಲಾ ಅದ್ರಲ್ಲೆಂಗ್ ದಂಡ್ ಮಾಡೋದ್ ತಿಳೀವಲ್ದೇ’

ಕವಿ ತೆಗಳು

— ನೀರಗುಂದ ಕೇಶವಮೂರ್ತಿರಾವ್

ನೋಡಲಿಕೆ ಇವನೊಬ್ಬ ಹುಂಬ
ಆದರೂ ಕವಿ-ತೆಗಳ್ನ ಬರೆದಾನೆ
ಕೊರೆದಾನೆ ಪುಸ್ತಕದ ತುಂಬ
ಕವಿಗೋಷ್ಠಿಯಲ್ಲಿವನ ಕವಿ-ತೆಗಳ
ವಾಚನವಿಲ್ಲ.
ಪತ್ರಿಕೆಗಳಲ್ಲಂತೂ ಪುಟವೊಂದನೂ
ಪ್ರಿಂಟಿಸುವಾತ ಪುಟ್ಟಿಲ್ಲ.
ಆದರೂ ಇನಿತಿಲ್ಲ ಇವನಿಗೆ ಜಂಬ !
ಸಂಜೆ ಗಾಂಧೀ ಬಜಾರಿನ ಹೋಟೆಲಿನಲಿ
(ಬಿಟ್ಟೀ) ಕಾಫೀ ಹೀರುತ್ತಿರುವಾಗಿವನ
ಕವಿ-ತೆಗಳ ಕೇಳಲೇ ಬೇಕು
ಆಗಿರುವುದಿಲ್ಲಿವನ ಬಾಯಿಗೆ ಬ್ರೇಕು.
ಮಿನಿಟಿಗೊಮ್ಮೆ ಮಿಲ್ಟನ್ನು, ಬೈರನ್ನು
ಎನ್ನುವ ಇವಗೆ, ಕನ್ನಡದ ಆದಿ ಕವಿ ಪಂಪ
ಅವನೊಬ್ಬ ಗಾಂಪ !
ವ್ಯಾಸ-ಭಾಸರ ಕಾವ್ಯಗಳೆಲ್ಲ ಆಭಾಸ !
ಪದವಿಟ್ಟಳುಪದೊಂದಗ್ಗಳಿಕೆ ಕವಿ
ನಾರಣಪ್ಪನದು
ಪದವಿಟ್ಟು ಅಳಿಸುವ (?) ತೆಗಳಿಕೆ
ಈಯಪ್ಪನದು.
ಮೂಡಲ ಯುಗದ ಕವಿಗಳ್ಹಂಗೆ-
ಕುಸುಮ ಶರನ ತಾಪದಿಂದ
ಭಾಮಿನಿಯ ಬೆನ್ನಟ್ಟಿ
ವೃತ್ತದೊಳು ಸುತ್ತಾಡಿ; ಭೋಗ ಪಟ್ಟು
ಕಂದಂಗಳ ಸೃಷ್ಟಿಸಿ, ರಗಳೆ ಮಾಡಿ
ವಚನದಿಂ ಸಂತೈಸುವಂತಹ
ಕವಿತೆಗಳ್ನೂ ಬರೆದಾನೆ
ಮತ್ತೆ-

ನವಯುಗದವರಂತೆ
ಗುರುವನ್ನು ಲಘುವಾಗಿ ಮಾಡಿ
ಮಾತ್ರೆಗಳನೆಣಿಸದೆ
ಪ್ರಾಸಗಳತ್ರಾಸಿಲ್ಲದೇ
ಮು
ಡಿ
ಯಿಂ
ದ
ಅ
ಡಿ
ವರೆಗೆ.
ಆ ಕಡೆಯಿಂದ ಈ ಕಡೆಗೆ
ತಲೆ ಕೆಳಗು ಮಾಡಿ ಓದಿದರೂ
ಅರ್ಥವಾಗದ ಮೋಡಿ ಕವಿತೆಗಳನ್ನು
ಬರೆದಾನೆ.
ಆಗಾಗ ಕವಿಗಳನ್ನು
ತೆಗಳಿಯೂ ಕವಿ-ತೆಗಳ
ಬರೆದಾನೆ !

ಹಾದಿಯಲ್ಲಿ ಕೇಳಿಸಿದ್ದು :

"ಮೊನ್ನೆ ಉತ್ತರ ರಾಮಾಯಣ ನೋಡ್ಲಿಲ್ವೇನ್ರಿ, ಅದೇ ಶ್ರೀ ರಾಮಚಂದ್ರ ರಾಜ ಸಭೇಲಿ ಕೂತು, ಲವಕುಶ ತನ್ನ ಗುಣಗಾನ ಮಾಡೋದನ್ನ ತಲ್ಲೀನನಾಗಿ ಕೇಳ್ತಾ ಇದ್ದದ್ದು. ಟಿ. ವಿ. ನಲ್ಲಿ ರಾಜೀವ್‌ಗಾಂಧಿ ಗುಣಗಾನ ಮಾಡೋದೂ ಸಹಾ ಅದೇ ಪರಂಪರೆ ತಾನೆ. ಅದ್ರಲ್ಲಿ ತಪ್ಪೇನು ".

ಮುಖಪುಟ ಸಮರ

— ಅ. ರಾ. ಸೇ.

ಪ್ರತಿಕ್ರಿಯೆ

ಎಲ್ಲೆಲ್ಲಿಯೂ ಸಿ.ಎ.ಜಿ.ಯ ಕೋಲಾಹಲ ತುಂಬಿತು. ಈ ತಲೆಮಾರಿನ ರಾಜ ಕಾರಣಿಗಳಾದ ಆಮೋದ್ ಮತ್ತು ಪ್ರಮೋದ್ ಅವರ ಅಭಿಪ್ರಾಯ ಮುಗಿಲು ಹಳ್ಳಿಯ ಈ ತಲೆಮಾರಿನ ಪತ್ರಿಕೆಗಳಾದ ಮುಗಿಲುಹಳ್ಳಿ ತಂತಿ ಮತ್ತು ಮುಗಿಲು ಹಳ್ಳಿ ಕಹಳೆಗಳಲ್ಲಿ ಹೀಗೆ ದಾಖಲಾಗಿದೆ :

ತಂತಿಯಲ್ಲಿ ಆಮೋದ್ ಹೇಳಿಕೆ :

ಈ ಮಾತನ್ನು ಕೇಳಿ ನಾನು ಶಿಳ್ಳೆ ಹೊಡೆದೆ. ಹೋಗಲಿ, ತೊಲಗಿ ಹೋಗಲಿ. ಇಲ್ಲಾ ಇಲ್ಲದ ಪ್ರಶ್ನೆಗಳನ್ನು ಕೇಳುವವರಿಲ್ಲದೆ ಹೋಗುವುದೇ ಕ್ಷೇಮ. ನಮ್ಮ ನಾಯಕರನ್ನು ಯಾರೂ ಪ್ರಶ್ನಿಸಕೂಡದು.

ಪ್ರಶ್ನೆ : ಏಕೆ ?

ಉತ್ತರ : ನಾವು ಏನು ಮಾಡಿದರೂ, ಉಟ್ಟಿದ್ದು ಬಿಚ್ಚಿ ಕುಣಿದರೂ ಅವರು ಏನು ಹೇಳುವುದಿಲ್ಲ.

ಕಹಳೆಯಲ್ಲಿ ಪ್ರಮೋದ್ ಹೇಳಿಕೆ :

ಇದೆಂಥ ದೇಶ, ಇವರೆಂಥ ಜನ? ದೇಶದ ರಕ್ಷಣೆಯ ವಿಷಯಕ್ಕೂ ಲಂಚ ತಿಂಗಳ ಸಂಬಳ ಕೊಡುವುದಕ್ಕೂ ಲಂಚ ! ಇವರು ಏನು ಮಾಡಿದರೂ ಹಾಳೇ !

ಪ್ರಶ್ನೆ : ಏಕೆ ?

ಉತ್ತರ : ದೇಶ ಹಾಳಾಗುತ್ತಿದೆ.

ಸಂಪಾದಕರ ಪ್ರತಿಜ್ಞೆ

ಮು. ತಂತಿಯ ಸಂಪಾದಕ ಗುರ್ರಿ, ಮು. ಕಹಳೆಯ ಸಂಪಾದಕ ರೇವಣ್ಣ, ಸಿನ್ನಿನ್ನಾಟಿ ಸರ್ಕಲ್ಲಿನಲ್ಲಿ ಸೇರಿ, ಹೋಟೆಲ್ ಕಾಂಟಿಕಿಗೆ ಚಹಾ ಕುಡಿಯಲು ಹೋದರು.

ರೇವಣಿ : ಲೇ, ಬೆರ್ಕಿ ನನ ಮಗನೇ, ಹೆಂಗೈತೆ ಬಿಸಿನೆಸ್ ? ಸಿ.ಎ.ಜಿ. ಅಂದ್ರೇನಲೇ ? ಎಲ್ಲಿರ್ತತೆ ? ಯಾಕೆ ರಿಪೋರ್ಟ್ ಕೊಡ್ತತೆ ? ಕೊಟ್ರೆ ಇವರಿಗೇನು ?

ಗುರ್ರಿ : ಏಳೋ ನಿನ್ನಾಪ್ನ, ಪಿ....ರಿ ಮಗನೇ, ಸಿ.ಎ.ಜಿ. ಅಂದ್ರೆ ಕಾರಿನ ರಿಜಿಸ್ಟ್ರೇಷನ್ ನಂಬ್ರು, KAG ಅಂತಿರ್ಬೇಕಾಗಿತ್ತು. ಕೇರಳಕ್ಕೆ K ಹೋತು. MAG ಅಂತ ಇರ್ಬುಕ್ಕಾಗಿತ್ತು. ಕರ್ನಾಟಕ ಅಂತ ಆತಲ್ಲ. CAG ಅಂತ ಮಾಡಿದ್ರು. ತಾವೇ ಮಾಡಿ, ಅವರೇನೋ ಬರ್ದಿದ್ದಕ್ಕೆ, ಅವರ್ದೇ ತಪ್ಪು ಅಂತರೆ.

ರೇವಣಿ : ಎಲೆಕ್ಷನ್ನಾಕ್ಕತಲ್ಲ, ಅದಕ್ಕೇನಾರಾ, ಇದು ಎಫೆಕ್ಟ್ ಆದೀತೇ ?

ಗುರ್ರಿ : ಏನಾಕ್ಕತೆ ? ಯಾವ್ದೇನಾರೂ ಆಗ್ಲಿ ಕಲ್ಲ, ಗ್ಯಾರಂಟಿ ಸಕ್ಸಸ್ !

ರೇವಣಿ : ಮುಂಗ್ಗನ....ನೇ, ಮರ್‍ತ್ಗಂ ಬಿಡು ಜಯ್ಗ್ನೇ ಗ್ಯಾರಂಟಿ ಸಕ್ಸಸ್

ಗುರ್ರಿ : ಜಯ್ಗ್ನ, ಹೆಸ್ರಿಲ್ದಂಗೆ ಹೋಗ್ದಿದ್ರೆ ಯಾಕೆ ?

ರೇವಣಿ : ಕಲ್ಗನ ಅಡ್ರಸ್ಸೇ ಇಲ್ದಂಗೆ ಮಾಡ್ದಿದ್ರೆ ಯಾಕೆ ?

ಧರ್ಮದ ಹಸ್ತಕ್ಷೇಪ

೧. ಆಕಾಶಗ್ರಾಮ ಕ್ಷೇತ್ರ ನಿವಾಸಿ, ಶ್ರೀ ಉಲ್ಲೂಕೇಶ್ವರ ಪಾದ ಪದ್ಮಾರಾಧಕ, ಶಾರ್ದೂಲಾಂತಕ ಬಿರುದಾಂಕಿತ ಶ್ರೀ ಶ್ರೀ ಸಿಂಹಾನಂದರು ತಮ್ಮ ಶಿಷ್ಯಕೋಟಿಗೆ ಕೊಟ್ಟ ರಹಸ್ಯ ಆದೇಶ :

ಉಲ್ಲೂಕರಾದ ನಾವು ಸನಾತನ ಧರ್ಮಕ್ಕೆ ಬಂದ ಕಂಟಕವನ್ನು ತಪ್ಪಿಸಲು, ರಾಸಭರೊಡನೆ ಐಕಮತ್ಯವನ್ನು ಬಹಿರಂಗವಾಗಿ ಹೇಳುತ್ತಾ ಬಂದಿರುವುದು ಸರಿಯಷ್ಟೇ.

ಈಗ ಅದು ಕ್ಯಾನ್ಸಲ್. ಮುಂದಿನ ಎಲೆಕ್ಷನ್ನಿನಲ್ಲಿ, ನಮ್ಮವನಾದ ಜಯಶಿವರಾಮನಿಗೇ (ಎಂದರೆ ಜಯ್ಗನಿಗೇ) ನಿಮ್ಮ ಓಟು.

೨. ಆಕಾಶ ಗ್ರಾಮಾಧಿಪತಿ, ಉಲ್ಲೂಕಾಂತಕ, ಶ್ರೀ ರಾಸಭೇಶ್ವರ ಪಾದ ಪದ್ಮಾರಾಧಕರಾದ ಶ್ರೀ ಶ್ರೀ ಶಾರ್ದೂಲಾನಂದರು, ಒದೆದು ಕಳುಹಿದ ಆರ್ಡರ್.

ಜಯ್ಗನನ್ನು ನೆಗೆದು ಬೀಳುವಂತೆ ಮಾಡಿ. ಕಲ್ಗನಿಗೇ ಓಟು, ಸೀಟು, ಮಂತ್ರಿ

ಪದ.

ರಾಸಭಂ ಬಾಳ್ಗೆ

ಕೂಪ್

ಮುಗಿಲುಹಳ್ಳಿ ತಂತಿ

1989ರ ದೀಪಾವಳಿ ಸಂಚಿಕೆಯಲ್ಲಿ

ಸ್ಥಳೀಯ ಕವಿಸಿಂಹ ರ ಕವನಗಳು.

ಕಥಾ ಪ್ರವೀಣರ ಕತೆಗಳು.

ಅರ್ಥ, ಸಮಾಜ, ರಾಜಕೀಯ ಶಾಸ್ತ್ರಗಳ ಚಿಂತೆಗಳು, ವಿಶ್ವ ಮಟ್ಟದ ರಾಜಕೀಯ ತಾರೆ

ಶ್ರೀ ಜಯ ಶಿವರಾಮ ಉರ್ಫ್ ಜಯ್ಗ ಇವರ ಪಂಚರಂಗೀ ಚಿತ್ರದ ಮುಖ ಪುಟ.

ಮುಗಿಲುಹಳಿ ಕಹಳೆ

ಶ್ರೀ ಶುಕ್ಲ ನಾಮ ಸಂವತ್ಸರದ ದೀಪಾವಳಿಯ ವಿಶೇಷ ಕೊಡುಗೆ

ವಿಶ್ವದ ಏಕೈಕ ನಾಯಕರೂ, ಆಶಾಕಿರಣವೂ ಆದ ಶ್ರೀ ಕಲ್ಲೇಶ್ವರ ಉರುಫ್ ಕಲ್ಗ ಇವರ ಪಂಚರಂಗೀ ಚಿತ್ರ ಮುಖಪುಟದಲ್ಲಿ.

ಕೋಲಾಹಲ

ಮುಗಿಲುಹಳ್ಳಿಯಲ್ಲಿ ಈ ಎರಡು ಜಾಹಿರಾತುಗಳು ಕೋಲಾಹಲವನ್ನೆಬ್ಬಿಸಿದವು. ಕಲ್ಗ ತನ್ನ ಮಗ ಆಮೋದನೊಡನೆ, ಜಯ್ಗ ಪ್ರಮೋದನೊಡನೆ ಕಾರುಹತ್ತಿ, ಸಂಪಾದಕರನ್ನು ಹುಡುಕಲು ಒಂದು ಸಾವಿರ ಲೀಟರ್ ಪೆಟ್ರೋಲ್ ಸುಟ್ಟರು. ಶ್ರೀ ಶ್ರೀಗಳಾದ ಸಿಂಹಾನಂದ ಶಾರ್ದೂಲಾನಂದರು ಗುರ್ಸಿ ಮತ್ತು ರೇವಣಿಗೆ ಬಹಿಷ್ಕಾರ ಹಾಕಿದರು. ಕೋಡಿ ಚೌಡಮ್ಮನ ಗುಡಿಯ ಮುಂದೆ ಅಭೂತಪೂರ್ವ ಸಭೆ ನಡೆದು ತಂತಿ, ಕಹಳೆ ಪತ್ರಿಕೆಗಳಿಗೆ ಬಹಿಷ್ಕಾರ ಹಾಕಲಾಯ್ತು. ಮರುದಿನ ಈ ಕೋಲಾಹಲದ ಸುದ್ದಿಯನ್ನು ಪ್ರಕಟಿಸಿ ಎರಡೂ ಪತ್ರಿಕೆಗಳು ಹತ್ತು ಸಾವಿರ ಪ್ರಸಾರ ಮುಟ್ಟಿದವು. ಬಯಲೊಳಗೆ ಮನೆಯೋ, ಮನೆಯ ಸುತ್ತಲೂ ಬಯಲೋ ? ಯಾರಿಗೂ ತಿಳಿಯಲಿಲ್ಲ.

ಬಹುಮಾನಿತ ಪ್ರಬಂಧ

ಪ್ರಜಾಪ್ರಭುತ್ವದ ಮೂಲಸ್ತಂಭ ಪತ್ರಿಕೆಗಳು ಶಾಸಕಾಂಗದಲ್ಲಿ ಪಕ್ಷಾಂತರದಿಂದ ಪ್ರಜಾಪ್ರಭುತ್ವಕ್ಕೆ ಏನೂ ಧಕ್ಕೆಯಾಗುವುದಿಲ್ಲವೆಂದು ಹಲವು ದಶಕಗಳ ವಿದ್ಯಮಾನ ಗಳು ಸ್ಥಾಪಿಸಿ, ಸಿದ್ಧಪಡಿಸಿವೆ. ಆದರೆ ಪತ್ರಿಕಾರಂಗದ ಪಕ್ಷಾಂತರ ಎಂದರೆ ರಾಸಭ ಪತ್ರಿಕೆಯ ಮುಖಪುಟದಲ್ಲಿ ಉಲ್ಲೂಕನ ಪಂಚರಂಗಿ ಚಿತ್ರ, ಉಲ್ಲೂಕ ಪತ್ರಿಕೆಯ ಮುಖಪುಟದಲ್ಲಿ ರಾಸಭನ ಪಂಚರಂಗಿ ಚಿತ್ರ ಹಾಕುವುದು ಮೊದಲ ಪಾಪ. ಆದ್ದರಿಂದ ಮುಗಿಲುಹಳ್ಳಿಯ ಬುದ್ಧಿಜೀವಿಗಳು, ವಿಚಾರವಾದಿಗಳು, ಪ್ರಗತಿ ಶೀಲರು, ಸಂಪ್ರದಾಯವಾದಿಗಳು, ಬಂಡಾಯದವರು ಮತ್ತು ಈ ಎಲ್ಲರ ನಡುವೆ ಇರುವ ಭಿನ್ನಮತೀಯರು ಸಭೆ ಸೇರಿ, ಈ ಪಾಪವನ್ನು ಶಿಕ್ಷಿಸಲು ಕೆಲವು ಉಪಾಯಗಳನ್ನು ಪರಿಶೀಲಿಸಿದರು.

1. ರೇವಣಿ, ಗುರ್ರಿ ಇಬ್ಬರನ್ನೂ ಗಡೀಪಾರು ಮಾಡುವುದು.

2. ಇಬ್ಬರ ಚರ್ಮ ಸುಲಿದು, ಎರಡು ಜೊತೆ ಚಪ್ಪಲಿ ಮಾಡುವುದು.

3. ಇಬ್ಬರ ಮೈಯಲ್ಲೂ ಉಪ್ಪು, ಖಾರ ತುಂಬಿ.......

4. ತಲೆ ಬೋಳಿಸಿ, ಕೆಮ್ಮಣ್ಣು ಸುಣ್ಣದ ಪಟ್ಟೆ ಬಳಿದು ಮೆರವಣಿಗೆ.

ಈ ವಿಷಯಗಳ ನಾಲ್ಕು ಪ್ರಬಂಧಗಳು ಮಂಡಿತವಾದ ಮೇಲೆ ಐದನೆಯ ವಿನೂತನ ಸಿದ್ಧಾಂತ ಮಂಡಿಸಲ್ಪಟ್ಟಿತು.

ಗುರ್ರಿ, ರೇವಣಿಗಳು ಮಹಾ, ಪಕ್ಕಾ, ಹಫ್ತುರಂಗಿಗಳು, ಅಕ್ಕಲ್‌ಗಾರರು. ಅವರು ಪಕ್ಷಾಂತರ ಮಾಡಿಯೇ ಇಲ್ಲ.

ಕಾರಣ

ತಂತಿಯ ಸಂಪಾದಕ ಗುರ್ರಿ ಈ ಮೊದಲು ಕರ್ಣ ಪಿಶಾಚಿಯ ಸಂಪಾದಕ ನಾಗಿದ್ದು, ಕಳೆದ ಎರಡು ದಶಕಗಳಿಂದ ಇಪ್ಪತ್ತು ದೀಪಾವಳಿ ಸಂಚಿಕೆ ಹೊರತಂದಿ ದ್ದಾನೆ. ಅದರ ಮುಖಪುಟಗಳಲ್ಲಿ ಬಂದ ರಾಜಕೀಯ ನಾಯಕರು, ಮಹಾ ಸಾಹಿತಿಗಳು, ಸಿನಿಮಾ ನಟರು, ನಟಿಯರು ದೀಪಾವಳಿ ಸಂಚಿಕೆ ಬಂದ ಏಳು ಅಥವಾ ಹದಿನೈದು ದಿನಗಳೊಳಗಾಗಿ ದಿವಂಗತರಾಗಿದ್ದಾರೆ.

ಹಾಗೆಯೇ ರೇವಣಿ ಈ ಹಿಂದೆ ಫಟಾಫಟ್ ಹಾಗೂ ಈಗ ಕಹಳೆಯ ಸಂಪಾ ದಕನಾಗಿ ತಂದಿರುವ ಹದಿನೈದು ವಿಶೇಷ ಸಂಚಿಕೆಗಳ ಮುಖಪುಟಗಳಲ್ಲಿ ಮೆರೆದವರು ಆ ಮುಂದೆ ಒಂದು ತಿಂಗಳೊಳಗಾಗಿ ಹರೋಹರ.

ಹೀಗಾಗಿ ಗುರ್ಸಿಯು ಜಯ್ಗನನ್ನು ರೇವಣಿ ಕಲ್ಗನನ್ನೂ, ಅತಿ ಮುಂದಾಲೋಚನೆಯ ರಾಜಕೀಯ ಪ್ರಜ್ಞೆ ತೋರಿಸಿ (ಸ್ಟೇಟ್ಸ್‌ಮನ್‌ಶಿಪ್) ಈ ವರ್ಷದ ದೀಪಾವಳಿ ಸಂಚಿಕೆಗಳ ಮುಖಪುಟಗಳಿಗೆ ಆಯ್ಕೆ ಮಾಡಿದ್ದಾರೆ.

"ಇತಂಹ ದೂರದರ್ಶಿಗಳಿಗೆ ಸಾಮಾಜಿಕ ಸನ್ಮಾನವಾಗಬೇಕೇ ಹೊರತು, ಶಿಕ್ಷೆಯಲ್ಲ .

ಲೇಟೆಸ್ಟ್ ನ್ಯೂಸ್ (ಸ್ಟಾಫ್ ಪ್ರೆಸ್)

ಕಲ್ಗ, ಜಯ್ಗ ಇಬ್ಬರೂ ಕಹಳೆ, ತಂತಿಗಳಿಗೆ ಐದು ಸಾವಿರ ಕೊಟ್ಟು, ತಮ್ಮ ಚಿತ್ರ ಪ್ರಕಟಿಸಬಾರದೆಂದು ಬೇಡಿಕೊಂಡಿದ್ದಾರೆ.

ಹಾಗೆಯೇ ಭಾರತಮಾತೆ, ಕನ್ನಡ ಮಾತೆಯರೂ ತಮ್ಮ ತಂಟೆಗೆ ಬರಬಾರದು, ತಮ್ಮ ಚಿತ್ರ ಮುಖಪುಟದಲ್ಲಿರಕೂಡದು ಎಂದು ಆಗ್ರಹಪೂರ್ವಕ ಆಶೀರ್ವಾದ ಪತ್ರಗಳನ್ನು ಕಲ್ಗ, ರೇವಣಿ ಇವರಿಗೆ ಬರೆದಿದ್ದಾರಂತೆ.

ಮಹಾ ಜನರೇ.......
ಎನ್ನುತ್ತಾರಲ್ಲ
ಮಂತ್ರಿಗಳು ಭಾಷಣ ಮಾಡುತ್ತ
ಏಕೆ ?
'ಜನ' ಎಂಬ ಶಬ್ದ
ನಪುಂಸಕ ಲಿಂಗ-ಅದಕ್ಕೆ


ಕುಮಾರ ಚಲ್ಯ

ಮಾಸ್ ಕಾಟ್ ಆಗ್ರೋ ಕೆಮಿಕಲ್ಸ್
ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,
ಪೀಣ್ಯ ಇಂಡಸ್ಟ್ರಿಯಲ್ ಏರಿಯಾ,
ಬೆಂಗಳೂರು–560 058.

ದೂರವಾಣಿ : 395902 ತಂತಿ : 'ಮಾಸ್ ಕಾಟ್' ಟೆಲೆಕ್ಸ್ -845-580
ಭತ್ತ, ಕಬ್ಬು ಮತ್ತು ಗೋಧಿಯ ಬೆಳೆಗಳಲ್ಲಿ ಕಳೆ ನಿಯಂತ್ರಣ ಮಾಡುವುದಕ್ಕೆ
''ನಾಕ್ವೀಡ್'' ಕಳೆನಾಶಕವನ್ನು ಉಪಯೋಗಿಸಿರಿ.

ಶುಭಾಶಯಗಳೊಂದಿಗೆ :–



ಎನ್. ಎಸ್ ಗಿರಿಮಾಜಿ ಅಂಡ್ ಸನ್ಸ್
[ಬೆಂಗಳೂರು]

ನಂ. 46, ಇಂಡಸ್ಟ್ರಿಯಲ್ ಸಬರ್ಬ್
ಯಶವಂತಪುರ, ಬೆಂಗಳೂರು–560 022.

REGISTERED No. BGW-180

Printed by V.R. NATH for the Publisher M. SHIVA KUMAR, Published and owned by M. SHIVA KUMAR, 36, 6th Main Road, Malleswaram, Bangalore–560 003. Printed at IMPRESSIONS, 404, Sampige Road, Malleswaram, Bangalore–560 003. Editor : M. SHIVA KUMAR